ಹಿತ್ತಲ ಗಿಡ

ಚಾತುರ್ಮಾಸಿಕ

“ತಳಮಟ್ಟದ ಜನರಿಗೆ ಪ್ರತಿಫಲ
ನೀಡುವಂತಹ ತಂತ್ರಜ್ಞಾನ, ಸಂಸ್ಥೆ
ಮತ್ತು ಮೌಲ್ಯಗಳನ್ನು ಹುಟ್ಟು
ಹಾಕುವತ್ತ ಕೈ ಜೋಡಿಸೋಣ ”

ಪೈರು 15, ಕೊಯಿಲು 1-2, ಜನವರಿ-ಆಗಸ್ಟ್, 2009

ಒಂದು ವಿನೂತನ ವಿವಾಹ



ಏಳು ತಲೆಮಾರಿನ ಹಲಸು



ಈ ಸಂಚಿಕೆಯಲ್ಲಿ

ದೇಶೀಯ ಜ್ಞಾನ, ತಂತ್ರಜ್ಞಾನ ಮತ್ತು ಸಂಸ್ಥೆಗಳು, ತಳಮಟ್ಟದ ಅನುಶೋಧನೆ, ಸ್ಥಳೀಯ ಸಂಪನ್ಮೂಲ, ಜೀವ ವಿವಿಧತೆ ಮತ್ತು ಪಾರಂಪರಿಕ ಆಹಾರ ಇವುಗಳ ಮೂಲಕ ಸುಸ್ಥಿರ ಕೃಷಿ ಅಭಿವೃದ್ಧಿ ಮೇಲಿನ ಚರ್ಚೆಗೆ ಮೀಸಲಾದ ಪತ್ರಿಕೆ

ಹನಿಬೀ ಬಳಗ

Honey Bee (*English*)

Prof. Anil K.Gupta, Indian Institute of Management,
Vastrapur, Ahmedabad - 380 015, Ph: 079-26307241
email: anilg@nifindia.org, honeybee@sristi.org

Ama Akha Pakha (*Oriya*)
Dr. Balaram Sahu, 3R BP 5/2, BP Colony, Unit-8,
Bhubaneswar - 751 012, Orissa, balaram_sahu@hotmail.com

Loksarvani (*Gujarati*)
Dilip Koradiya, SRISTI P.O.Box 15050
Ahmedabad, Gujarat - 380015, loksarvani@sristi.org

Makhir (*Pahari*)
Dr.A.Chandan, ERA, Khundian, District Kangra,
Himachal Pradesh - 176030, makhir@epatra.com

Num Vali Velanmai (*Tamil*)
P. Vivekanandan, 45, TPM Nagar, Virattipathu
Tamil Nadu - 625 010, numvali@vsnl.com

Sujh-Bujh Aas Paas Ki (*Hindi*)
Shalini Sharma, H-12 ODS Flats Lajpat Nagar 4
New Delhi - 110024, sujhbuj@sristi.org

Palle Srujana (*Telugu*)
Brig. (Retd.) P.Ganesham,
55, Vayupuri, Secunderabad - 500 094. (A.P.)
Ph. : 040-27118555
honeybeeap@gmail.com
and

Hittalagida (*Kannada*)

ಹಿತ್ತಲ ಗಿಡದ ಪೋಷಣೆಗೆ ಸಹಾಯ:

PRITVI (People Rewarding Initiatives in Technology, Values & Institutions), Bangalore, **SRISTI** (Society for Research and Initiatives for Sustainable Technologies and Institutions), & **NIF** (National Innovation Foundation, India), Ahmedabad

ಸಂಪಾದಕೀಯ

ಕೃಷಿ ಸಂಶೋಧನೆಯ ಪ್ರಜಾತಾಂತ್ರೀಕರಣ

ಕೃಷಿ ಸಂಶೋಧನೆಯ ಬಗ್ಗೆ ಇಂದು ಪ್ರಪಂಚದಾದ್ಯಂತ ನಾಗರಿಕ ಸಮಾಜ, ಗುಂಪುಗಳು ಸಾರ್ವಜನಿಕವಾಗಿ ಚರ್ಚೆ ನಡೆಸುತ್ತಿವೆ. ಇದರ ಫಲವಾಗಿ 'ಕೃಷಿ ಸಂಶೋಧನೆಯ ಪ್ರಜಾತಾಂತ್ರೀಕರಣ' ಎನ್ನುವ ಪ್ರಗತಿಪರ ಕಲ್ಪನೆ ಹುಟ್ಟಿಕೊಂಡಿದೆ. ಇದರ ಮುಂದಾಳತ್ವವನ್ನು ಇಂಗ್ಲೆಂಡ್ ಮೂಲದ ಅಂತರರಾಷ್ಟ್ರೀಯ ಪರಿಸರ ಮತ್ತು ಅಭಿವೃದ್ಧಿ ಸಂಸ್ಥೆ(*International Institute for Environment and Development (IIED)*) ವಹಿಸಿದೆ. ದಕ್ಷಿಣ ಏಷಿಯಾದಲ್ಲಿ ಇದನ್ನು 'ಆದರ್ಶ'(*Alliance for Democratising Agricultural Research in South Asia*) ಎಂದು ಕರೆಯಲಾಗಿದ್ದು ಇದಕ್ಕೆ ಹೈದರಾಬಾದ್ ಮೂಲದ ಗೆಳೆಯ ಪಿ.ವಿ.ಸತೀಶ್ ನೇತೃತ್ವದ 'ಡೆಕ್ಕನ್ ಡೆವಲಪ್ ಮೆಂಟ್ ಸೊಸೈಟಿ' ಮುಂದಾಳತ್ವ ನೀಡಿದೆ. ನೇಪಾಳ, ಬಂಗ್ಲಾದೇಶ, ಶ್ರೀಲಂಕಾಗಳ ಜೊತೆ ಭಾರತದಲ್ಲಿ ಅನೇಕಾನೇಕ ಗುಂಪುಗಳು ಇದರ ಭಾಗವಾಗಿವೆ. ಇದರ ವಿವಿಧ ಚಟುವಟಿಕೆಗಳು ಚುರುಕಾಗಿ ನಡೆಯುತ್ತಿವೆ. 'ಕೃಷಿ ಸಂಶೋಧನೆಯ ಪ್ರಜಾತಾಂತ್ರೀಕರಣ' ದಡಿ ಕೈಗೊಂಡಿರುವ ಒಂದು ಮಹತ್ವದ ಕಾರ್ಯಕ್ರಮ **ಪ್ರಜಾತೀರ್ಪು.** ವಿವಿಧ ವಲಯಗಳ ಪ್ರತಿನಿಧಿಗಳು ಸಾಕ್ಷಿ ದಾರರಾಗಿದ್ದು ರೈತರೇ ತೀರ್ಪು ನೀಡುವಂತಹ ಬಹಳ ವಿಶಿಷ್ಟವಾದ ಈ ಕಾರ್ಯಕ್ರಮ ಮೊದಲ ಬಾರಿ ಕರ್ನಾಟಕದಲ್ಲಿ ಇದೇ ನವೆಂಬರ್ ಕೊನೆಯಲ್ಲಿ ನಡೆಯಲಿದೆ.

* * * * * *

ಹೊಸದುರ್ಗದ ಹಿರಿಯ ರೈತ ಮುಂದಾಳು ಬಯಲಪ್ಪನವರು ತಮ್ಮ ಮಗನ ಮದುವೆಯನ್ನು ಒಂದು ವಿನೂತನ ರೀತಿಯಲ್ಲಿ ಜರುಗಿರಿಸಿರುವುದನ್ನು ಈ ಸಂಚಿಕೆಯಲ್ಲಿ ವರದಿ ಮಾಡಲಾಗಿದೆ. ಇದರಿಂದ ಪುಲಕಿತಗೊಂಡ ಖ್ಯಾತ ಪತ್ರಕರ್ತ ಮಿತ್ರ ದೇವೆಂದರ್ ಶರ್ಮ ಈ ವಿಚಾರವನ್ನು ಹಲವೆಡೆ ಹೇಳಿ ಆಂಗ್ಲ ಮಾಧ್ಯಮದ ಮೂಲಕ ಸಾಕಷ್ಟು ಪ್ರಚಾರವನ್ನೂ ಒದಗಿಸಿರುವರು. ಮದುವೆಯಂತಹ ಸಾಮಾಜಿಕವಾಗಿ ಒಗ್ಗೂಡುವ ಒಂದು ಅವಕಾಶವನ್ನು ಈ ರೀತಿ ರಚನಾತ್ಮಕವಾಗಿ ಬಳಸಿಕೊಂಡಿದ್ದೆ ಆದಲ್ಲಿ ಇದು ಸುಸ್ಥಿರ ಕೃಷಿ ಅಭಿವೃದ್ಧಿಗೆ ಅಷ್ಟೇಕೆ ಇಡೀ ಗ್ರಾಮೀಣ ಬದುಕಿಗೇ ಶಕ್ತಿ ನೀಡಲು ಹೊಸತೊಂದು ಸಾಧ್ಯತೆಯನ್ನು ತೆರೆದಿಡುತ್ತದೆ. ನಮ್ಮ ರೈತ ಸಂಘದ ಮಿತ್ರರು ಈ ಬಗ್ಗೆ ಮತ್ತಷ್ಟು ಗಮನ ಹರಿಸಿ ತಮ್ಮ ಕುಟುಂಬದ ವಿವಾಹಗಳನ್ನು ಇದೇ ರೀತಿ ನೆಡುಸುವಂತಾಗುತ್ತಾರೆಂದು ಆಶಿಸುತ್ತೇನೆ.

* * * * * *

ಜನಪ್ರಿಯ ಚಿತ್ರ ನಿರ್ದೇಶಕರೂ, ಸಾಹಿತಿಗಳೂ ಆದ ಮಿತ್ರ ನಾಗತಿಹಳ್ಳಿ ಚಂದ್ರಶೇಖರರು ತಮ್ಮ ಹುಟ್ಟೂರಿನಲ್ಲಿ ಪ್ರತೀ ವರ್ಷವೂ ಆಚರಿಸುತ್ತಿರುವ 'ಸಾಂಸ್ಕೃತಿಕ ಹಬ್ಬ' ದಲ್ಲಿ ಈ ಬಾರಿ ಭಾಗವಹಿಸುವ ಅವಕಾಶ ದೊರೆಯಿತು. ಈ ಹಬ್ಬದ ಮೂಲಕ ಪಟ್ಟಣ ಸಂಸ್ಕೃತಿಯ ಅವಿಭಾಜ್ಯ ಅಂಗಗಳಾದ ಚಲನಚಿತ್ರ, ವೆಬ್‌ಸೈಟ್ ಮತ್ತು ಕವಿಗೋಷ್ಠಿಗಳಂತಹಾ ಕಾರ್ಯಕ್ರಮಗಳನ್ನು ಗ್ರಾಮೀಣ ಸಂಸ್ಕೃತಿಯ ಕೊಂಡಿಗಳಾದ ಆಟ, ಊಟ, ನಾಟಕ, ಯಕ್ಷಗಾನಗಳೊಂದಿಗೆ ಮೇಳೈಸುವ ಪ್ರಯೋಗವನ್ನು ಚಂದ್ರಶೇಖರ್ ಗಂಭೀರವಾಗಿ ನೆಡೆಸಿರುತ್ತಾರೆ. ನಮ್ಮ ಗ್ರಾಮೀಣ ಬದುಕಿಗೆ ಪುನರ್‌ಚೇತನ ನೀಡುವಂತಹ ಈ ರೀತಿಯ ಪ್ರಯತ್ನಗಳು ನಿಜಕ್ಕೂ ಪ್ರಶಂಸನೀಯವಾಗಿದೆ. ಸಮಾಜದಲ್ಲಿ ಉನ್ನತ ಸ್ಥಾನ, ಮಾನ, ಘನತೆ, ಗೌರವ, ಜನಪ್ರಿಯತೆಗಳಿಸಿರುವ ನಾಗತಿಹಳ್ಳಿ ಚಂದ್ರಶೇಖರ್‌ರಂತಹವರು ತಮ್ಮ ತಮ್ಮ ಹಳ್ಳಿಗಳತ್ತ ಈ ರೀತಿ ಮುಖ ತಿರುಗಿಸಿದ್ದೇ ಆದಲ್ಲಿ ಗ್ರಾಮೀಣ ಭಾರತದಲ್ಲಿ ಶಾಂತಿ, ಪ್ರಗತಿ, ನೆಮ್ಮದಿಗಳು ನೆಲಸುವಂತೆ ಮಾಡುವ ದಾರಿಯನ್ನು ಸ್ವಲ್ಪ ಸುಗಮಗೊಳಿಸಿದಂತಾಗುತ್ತದೆ.

* * * * * *

ಕನ್ನಡದಲ್ಲಿ ಕೃಷಿಗೇ ಮೀಸಲಾದ ಪತ್ರಿಕೆಗಳು ಬೆರಳೆಣಿಕೆಯಷ್ಟಿದ್ದರೂ ಅವು ಗಮನಾರ್ಹ ಸಾಧನೆ ಮಾಡಿರುವವು. ಇವುಗಳು ಮತ್ತಷ್ಟು ಗಟ್ಟಿಯಾಗಿ ಎಲ್ಲ ರೈತರ ಕೈಸೇರುವಂತಾಗಲು "ಕೃಷಿ ಸಂಪಾದಕರ ಪರಿಷತ್" ಅಸ್ತಿತ್ವಕ್ಕೆ ಬಂದಿದೆ. ಇದು ಒಂದು ಒಳ್ಳೆಯ ಬೆಳವಣಿಗೆ.

ಡಾ॥ ಪ್ರಕಾಶ್ ಕಮ್ಮರಡಿ

ಇಲಿಗಳ ಸಮಸ್ಯೆಗೆ

ಮನೆಗಳಲ್ಲಿ ಇಲಿಗಳು ಹೆಚ್ಚಾದಾಗ ಅನೇಕ ಸಮಸ್ಯೆಗಳು ಎದುರಾಗುತ್ತವೆ. ಇಲಿ ಬೋನು, ಕೇಕ್, ವಿಷ ಇತ್ಯಾದಿಗಳನ್ನು ಪ್ರಯೋಗಿಸಿ ಕೊಲ್ಲುವ ಪ್ರಯತ್ನಗಳು ನಡೆಯುತ್ತಿರುತ್ತವೆ. ಆದರೆ ಇದರಿಂದ ಸಮಸ್ಯೆ ನಿವಾರಣೆಯಾಗದು. ಬೆಕ್ಕು ಸಾಕಿ ನಿಯಂತ್ರಿಸುವುದು ಮೊದಲಿನಿಂದ ಬಂದ ವಾಡಿಕೆಯಾಗಿದೆ. ಇಂದು ಅನೇಕ ರೈತರು ಬೇರೆ ಪ್ರಯತ್ನ ಮಾಡಿ ಇಲಿಗಳನ್ನು ನಿಯಂತ್ರಿಸಿದ್ದಾರೆ. ಇಲಿಗಳಲ್ಲಿ ಕಪ್ಪು, ಬಿಳಿ ಇಲಿಗಳಿದ್ದು ಕಪ್ಪು ಇಲಿಗಳ ಸಂತಾನವೇ ಹೆಚ್ಚಾಗಿ ಅವುಗಳ ಹಾವಳಿ ಕಂಡಿದ್ದೇವೆ. ಆದರೆ ಬಿಳಿ ಇಲಿ ಒಂದನ್ನು ಸಾಕಿದರೆ ಅದು ನಮ್ಮೊಡನೆ ಬೆಕ್ಕಿನಂತೆ ಹೊಂದಿಕೊಂಡು ಮನೆಯಲ್ಲೆಲ್ಲಾ ಓಡಾಡಿಕೊಂಡು ಇರುತ್ತದೆ. ಬಿಳಿ ಇಲಿ ಒಂದು ಇದ್ದರೆ ಕಪ್ಪು ಇಲಿಗಳು ಮನೆ ಬಿಟ್ಟು ಓಡಿ ಹೋಗುತ್ತವೆ. ಚನ್ನರಾಯಪಟ್ಟಣ ತಾಲೂಕು ತಿಮ್ಲಾಪುರದಲ್ಲಿ ಹರಿಂಜಯ ಎಂಬ ಸಾವಯವ ಕೃಷಿಕ ಬಿಳಿ ಇಲಿ ಸಾಕಿ, ಅವುಗಳನ್ನು ಅಭಿವೃದ್ಧಿಮಾಡಿ ರೈತರಿಗೆ ಪರಿಚಯಿಸುತ್ತಾ ಕೇಳಿದವರಿಗೆ ಉಚಿತವಾಗಿ ಕೊಡುತ್ತಿದ್ದಾರೆ.

ವಿವರಗಳಿಗೆ ಶ್ರೀ ಬಸವರಾಜು ಸಂತೇಶಿವರ, ದೂ.ಸಂ. – 9611608472 ಅಥವಾ 9611731967 ಮೂಲಕ ಸಂಪರ್ಕಿಸಿ.

ಮಣ್ಣಿನ ನೀರು ಶೋಧಕ ಮತ್ತು ಬಾಟಲಿ

ಬೇಲೂರು ತಾಲೂಕಿನ ಮಲ್ಲಿಕಾರ್ಜುನಪುರದವರಾದ ಸಿದ್ಧರಾಮೇಗೌಡರು ಮಣ್ಣಿನಿಂದ ಮಾಡಿದ ನೀರಿನ ಶೋಧಕವನ್ನು (ಫಿಲ್ಟರ್) ಮತ್ತು ಬಾಟಲಿಯನ್ನು ತಯಾರಿಸಿದ್ದಾರೆ. 'ಶ್ರಿ ಕಮಂಡಲ' ಎಂದು ನಾಮಕರಣ ಮಾಡಲಾದ ನೀರಿನ ಶೋಧಕವು 15 – 20 ಲೀಟರಿನಷ್ಟು ಸಾಮರ್ಥ್ಯವನ್ನು ಹೊಂದಿದೆ. ಈ ಶೋಧಕವು ಈಗ ಸಿಗುವಂತ ಸ್ಟೀಲಿನ ಫಿಲ್ಟರ್ ತರಹ ಇದ್ದು ಮೇಲಿನ ಭಾಗದಲ್ಲಿ ನೀರಿನ ಶೋಧಕಗಳನ್ನು ಅಳವಡಿಸಲಾಗಿದೆ. ಶೋಧಗೊಂಡಿರುವ ನೀರು ಕೆಳ ಭಾಗದಲ್ಲಿ ಶೇಖರಣೆಯಾಗುತ್ತದೆ. ಔಷಧೀಯ ಗುಣವುಳ್ಳ ಮಣ್ಣಿನಿಂದ ತಯಾರಿಸಲಾದ ಶೋಧಕದಲ್ಲಿ ಶೇಖರಣೆಯಾದ ನೀರು ಸಹ ಆ ಗುಣಗಳನ್ನು ಹೊಂದಿರುತ್ತದೆ. ಇದರಲ್ಲಿರುವ ನೀರು ತಂಪಾಗಿರುವುದಲ್ಲದೆ ಹೆಚ್ಚು ದಿನ ಇದ್ದರೂ ಕೆಡುವುದಿಲ್ಲ. ಹಾಗೆ, ಶಾಲಾ ಮಕ್ಕಳಿಗೆ ಮತ್ತು ಕೆಲಸಕ್ಕೆ ಹೋಗುವವರಿಗೆ ಅನುಕೂಲವಾಗುವಂತೆ ಒಂದು ಲೀಟರ್ ಸಾಮರ್ಥ್ಯದ ಮಣ್ಣಿನ ಬಾಟಲಿಯನ್ನು ಸಹ ತಯಾರಿಸಿದ್ದಾರೆ. ಶ್ರಿ ಕಮಂಡಲದ ಗುಣಗಳನ್ನೇ ಹೊಂದಿರುವ ಈ ಬಾಟಲಿಯನ್ನು ತೆಗೆದುಕೊಂಡು ಹೋಗಲು ಅನುಕೂಲವಾಗುವಂತೆ ಬಿದಿರಿನ ಕವಚವನ್ನು ಮತ್ತು ಚೀಲವನ್ನು ತಯಾರಿಸಿದ್ದಾರೆ. ಮೇಲಿಂದ ಬಿದ್ದರೂ ಇದು ಒಡೆಯುವುದಿಲ್ಲವಂತೆ! ಪ್ಲಾಸ್ಟಿಕ್ ಬಾಟಲಿ ನೀರಿನಿಂದ ಅಪಾಯಗಳು ಅನೇಕ. ಹಾಗಾಗಿ ಮಣ್ಣಿನಿಂದ ತಯಾರಿಸಿರುವಂತ ಬಾಟಲಿಗಳನ್ನು ಬಳಸುವುದು ಹೆಚ್ಚು ಸೂಕ್ತವೆಂದು ಸಿದ್ಧರಾಮೇಗೌಡರು ಹೇಳುತ್ತಾರೆ.

ಹೆಚ್ಚಿನ ಮಾಹಿತಿಗೆ ಸಿದ್ಧರಾಮೇಗೌಡರ ವಿಳಾಸ : ಮಲ್ಲಿಕಾರ್ಜುನಪುರ, ಅಂದಲೆ ಅಂಚೆ, ಹಳೇಬೀಡು ಹೋಬಳಿ, ಬೇಲೂರು ತಾಲೂಕು, ಹಾಸನ ಜಿಲ್ಲೆ – 573216

ವಿಶೇಷ ಸೂಚನೆ

- ಹಿತ್ತಲಗಿಡದಲ್ಲಿ ದಾಖಲಿಸಿರುವ ವಿವಿಧ ಮಾಹಿತಿಗಳನ್ನು ಸಂಶೋಧನೆ, ವಾಣಿಜ್ಯ ಮತ್ತಾವುದೇ ದೃಷ್ಟಿಯಿಂದ ಬಳಸ ಬಯಸುವವರು ಮೊದಲು ಹಿತ್ತಲಗಿಡದ ಅನುಮತಿ ಪಡೆಯತಕ್ಕದ್ದು.
- ರೈತರು ಮೊದಲು ತಾಂತ್ರಿಕ ಮಾಹಿತಿಗಳನ್ನು ನೀಡಿರುವ ಅಥವಾ ಸೃಷ್ಟಿಸಿರುವ ವ್ಯಕ್ತಿಗಳ ಸಂಪರ್ಕ ಏರ್ಪಡಿಸಿ, ಸಂಪೂರ್ಣ ವಿವರಗಳನ್ನು ಪಡೆಯುವುದು ಸೂಕ್ತ. ನಂತರ ತಮ್ಮ ಅನುಭವಗಳನ್ನು ಹಿತ್ತಲಗಿಡದೊಡನೆ ಹಂಚಿಕೊಳ್ಳಬೇಕಾಗಿ ಕೋರಲಾಗಿದೆ.
- ಇಲ್ಲಿ ಪ್ರಕಟಿಸಿರುವ ಪದ್ಧತಿ ಮತ್ತು ತಂತ್ರಜ್ಞಾನಗಳ ಬಳಕೆಯಲ್ಲಿ ಆಗುವ ಯಾವುದೇ ನಷ್ಟ, ಅನಾಹುತಗಳಿಗೆ 'ಹಿತ್ತಲಗಿಡ' ಜವಾಬ್ದಾರಿಯಲ್ಲ.

– ಸಂಪಾದಕ

ಮಣ್ಣಿನ ಕೊರೆತ ತಡೆಯಲು ಕಾಡುಕಬ್ಬು

ಹರಿಯುವ ನೀರಿನ ರಭಸಕ್ಕೆ ದಂಡೆಯ ಬದಿಯ ಮಣ್ಣು ಕೊಚ್ಚಿಕೊಂಡು ಹೋಗುತ್ತದೆ. ಇದರ ಪರಿಣಾಮವಾಗಿ ಕಂದಕವು ಉಂಟಾಗುವುದಲ್ಲದೇ ಭೂಮಿಯ ಸವಕಳಿಯೂ ಆಗುತ್ತದೆ. ಇದರಿಂದ ಹೊಲದ ಬದಿಯಲ್ಲಿರುವ ಜಮೀನುಗಳ ರೈತರಿಗೆ ವಿಶೇಷ ಹಾನಿಯಾಗುತ್ತದೆ. ಪ್ರವಾಹ ಹೆಚ್ಚಾದಂತೆ ಮಣ್ಣಿನ ಸವಕಳಿಯೂ ಹೆಚ್ಚಾಗಿ ಜಮೀನಿಗೆ ಜಮೀನೇ ಕಂದರವಾಗಿ ಮಾರ್ಪಾಡಾಗುತ್ತದೆ. ಇದಕ್ಕೆ ಪರಿಹಾರವಾಗಿ ಅಲ್ಲಲ್ಲಿ ಬಿದಿರು, ಕೇದಿಗೆ, ಮುಂಡಿಗೆಯಂತಹ ಸಸ್ಯಗಳನ್ನು ಹಳ್ಳದಂಚಿಗೆ ಬೆಳೆಸುವ ಪದ್ಧತಿ ಇದೆ. ಈ ಎಲ್ಲಾ ಸಸ್ಯಗಳಿಗಿಂತ 'ಹುಚ್ಚು ಕಬ್ಬು' *(Saccharum Sponteneum L.)* ಹೆಚ್ಚು ಪರಿಣಾಮಕಾರಿಯಾಗಿ ಪ್ರವಾಹ ಕೊರೆತದಿಂದ ರಕ್ಷಣೆ ಒದಗಿಸುತ್ತದೆ. ಇದು ಸಾಮಾನ್ಯವಾಗಿ ಹೊಳೆಬದಿಗೆ ಬೆಳೆಯುವ ಸಸ್ಯ. ಇದರ ದಂಟು ಕಬ್ಬಿನ ಹೋಲಿಕೆ ಇದ್ದು ಸಿಹಿ ಇರುವುದಿಲ್ಲ. ಎರಡು ಅಡಿ ಉದ್ದದ ಹುಚ್ಚು ಕಬ್ಬಿನ ತುಂಡುಗಳನ್ನು ಕೊರೆತ ಇರುವ ಭಾಗದಲ್ಲೆಲ್ಲಾ ಹಾಕಿದರೆ ಗೆಣ್ಣು ಇದ್ದಲ್ಲೆಲ್ಲಾ ಚಿಗುರೊಡೆಯುತ್ತದೆ. ವೇಗವಾಗಿ ಬೆಳೆಯುವ ಹುಚ್ಚು ಕಬ್ಬು ಸುಮಾರು 10 ರಿಂದ 15 ಅಡಿ ಎತ್ತರಕ್ಕೆ ಬೆತ್ತದ ಬಳ್ಳಿಯಂತೆ ಬೆಳೆದು ಆಧಾರ ಇರದ ಕಾರಣ ಹೊಳೆಯತ್ತ ವಾಲಿ ಬೀಳುತ್ತವೆ. ಮಣ್ಣು ಸಿಕ್ಕಲ್ಲಿ ಗೆಣ್ಣಿಂದ ಬೇರು ಬರುತ್ತ ಸ್ವಲ್ಪವೇ ಸಮಯದಲ್ಲಿ ದಟ್ಟವಾಗಿ ಬೆಳೆದು ಹರಿವ ನೀರಿಗೆ ಕಡಿವಾಣ ಹಾಕುತ್ತದೆ. ಬೇರಿನಿಂದ ಮಣ್ಣನ್ನು ಬಿಗಿದು ಹಿಡಿಯುವ ಹುಚ್ಚು ಕಬ್ಬು ಎಂಥ ಬಿರುಸಿನ ಪ್ರವಾಹಕ್ಕೂ ಜಗ್ಗುವುದಿಲ್ಲ. ಪ್ರವಾಹದಲ್ಲಿ ಕೊಚ್ಚಿ ಬರುವ ಮಣ್ಣೆಲ್ಲ ಕಬ್ಬಿನ ರೆಂಬೆಗಳ ನಡುವೆ ಶೇಖರವಾಗುತ್ತಾ ಹೋಗುತ್ತದೆ. ಇದರಿಂದ ನಿಧಾನವಾಗಿ ಭೂ ವಿಸ್ತರಣೆಯೂ ಆಗುತ್ತದಲ್ಲದೆ ಹೊಳೆ ದಂಡೆಗೆ ಕಲ್ಲು ಕಟ್ಟಿ ಭೂಮಿ ಉಳಿಸಿಕೊಳ್ಳಲಾರದ ಆರ್ಥಿಕ ದುರ್ಬಲ ರೈತರಿಗೆ ಈ ಸರಳ ತಂತ್ರಜ್ಞಾನ ಸಹಾಯವಾಗಬಲ್ಲದು. ಶಿರಸಿಯ ಕಬ್ಬೆ ಊರಿನ ದೇವರಭಟ್ಟ ಎಂಬ ರೈತರು ಈ ರೀತಿಯ ಪ್ರಯತ್ನದಿಂದಾಗಿ ಕಂಬ್ಳಿ ಹೊಳೆಯ ಪ್ರವಾಹಕ್ಕೆ ಸಿಕ್ಕಿ ಕೊಚ್ಚಿ ಹೋಗುತ್ತಿದ್ದ ತಮ್ಮ ಜಮೀನನ್ನು ಉಳಿಸಿಕೊಂಡಿದ್ದಾರೆ.

ಮೂಲ: ಪ್ರಜಾವಾಣಿ, ಗುರುವಾರ 25, 2000

ಚಳಿಗಾಲದಲ್ಲಿ ಕ್ಯಾರೆಟ್‌ಗಳ ರಕ್ಷಣೆ

ಚೀನಾದೇಶದ ಪಿಂಗ್‌ಯಿನ್ ಹಳ್ಳಿಯ ಜನರು ಚಳಿಗಾಲದಲ್ಲಿ ಕ್ಯಾರೆಟ್‌ಗಳನ್ನು ತಾಜಾವಾಗಿ ಸಂರಕ್ಷಿಸುವ ವಿಧಾನವು ಇದಾಗಿದೆ. ಮೊದಲು ತೇವಾಂಶವನ್ನು ಹಿಡಿದಿಟ್ಟುಕೊಳ್ಳುವ ಸ್ಥಳವನ್ನು ಆರಿಸಿಕೊಳ್ಳಬೇಕು. ಆ ಸ್ಥಳದಲ್ಲಿ ಗುಂಡಿಯನ್ನು ತೋಡಿ ಒಳಗಡೆ ಕ್ಯಾರೆಟ್‌ಗಳನ್ನು ಇಡಬೇಕು. ನಂತರ ಮಣ್ಣಿನಿಂದ ಸಂಪೂರ್ಣವಾಗಿ ಮುಚ್ಚಬೇಕು. ಒಣಗಿರುವಂತಹ ಜೋಳದ ದಂಟುಗಳನ್ನು ಗುಂಡಿಯ ಮೇಲ್ಭಾಗದಿಂದ ಒಳಸೇರಿಸಬೇಕು. ದಂಟುಗಳು ಟೊಳ್ಳಾಗಿರುವ ಕಾರಣ ಗಾಳಿಯಾಡಲು ಅನುಕೂಲವಾಗಿ ಕ್ಯಾರೆಟ್‌ಗಳು ತಾಜಾವಾಗಿರಲು ಕಾರಣವಾಗುತ್ತದೆ. ಈ ರೀತಿಯಲ್ಲಿ ಸಂರಕ್ಷಿಸಿದ ಕ್ಯಾರೆಟ್‌ಗಳು 4 ರಿಂದ 6 ತಿಂಗಳು ತಾಜಾವಾಗಿ ಇರುತ್ತವೆ.

(ವಿವರಕ್ಕೆ http://www.urbanext.uiuc.edu ನೋಡಿರಿ)

ಗೋಧಿ ಸಂರಕ್ಷಣೆ


ಅಹಮದಾಬಾದಿನ ಜಿನೋಲ್ ಹಳ್ಳಿಯವರಾದ ದೂಧಭಾಯಿ ಅರ್‌ಜನ್ ಭಾಯಿ ಪಾಂಡವ್‌ರವರು ಗೋಧಿಯನ್ನು ಸಂರಕ್ಷಿಸಲು ಒಂದು ವಿಶೇಷ ಪದ್ಧತಿಯನ್ನು ಅನುಸರಿಸುತ್ತಾರೆ. ಮನೆಯಲ್ಲಿ ಸುಮಾರು 2 –3 ಅಡಿ ತಗ್ಗು ತೆಗೆದು ತಗ್ಗಿನ ತಳಭಾಗವನ್ನು ಗೋಧಿ ಹೊಟ್ಟಿನಿಂದ ತೆಳುವಾಗಿ ಹರಡಿ ನಂತರ ಗೋಧಿಯನ್ನು ತುಂಬುತ್ತಾರೆ. ಹೀಗೆ ಪದರ ಪದರವಾಗಿ ಗೋಧಿ ಹಾಕಿದ ನಂತರ ಗೋಧಿಯ ಹೊಟ್ಟನ್ನು ದಪ್ಪ ಪದರವಾಗಿ ಹಾಕಿ ಕೊನೆಗೆ ಮಣ್ಣನ್ನು ಮುಚ್ಚಬೇಕು ಎಂದು ಹೇಳಿದ್ದಾರೆ.

ಮೂಲ: ಹನಿ ಬೀ, Vol 19(2) ಎಪ್ರಿಲ್ – ಜೂನ್ 2008

ಗೆದ್ದಲುಗಳ ನಿಯಂತ್ರಣಕ್ಕೆ ಹೊಂಗೆ

ದಾನಭಾಯಿ ಮೊನಭಾಯಿ ದಾಮೋರ್‌ರವರು ಗುಜರಾತಿನ, ದುಂಗಾರ್‌ಪುರ್ ಜಿಲ್ಲೆಯವರು. ಇವರು ಗೆದ್ದಲುಗಳ ನಿಯಂತ್ರಣಕ್ಕೆ ಹೊಂಗೆಯ *(Pongamia pinnata (L.) Pierre.)* 20 ಕೆ.ಜಿ. ಒಣಗಿದ ಎಲೆಗಳನ್ನು, 20 ಕೆ.ಜಿ. ಕುರಿ ಹಿಕ್ಕೆಯೊಂದಿಗೆ ಎರಡಡಿ ಉದ್ದ, ಎರಡಡಿ ಅಗಲದ ಕಂದಕದಲ್ಲಿ ಹಾಕಿ ಮಣ್ಣನ್ನು ಮುಚ್ಚಿ ಮೇಲೆ ನೀರನ್ನು ಹಾಕುತ್ತಿರುತ್ತಾರೆ. ಮೂರು ಅಥವಾ ನಾಲ್ಕು ದಿನಗಳಾದ ನಂತರ ಅದನ್ನು ಚೆನ್ನಾಗಿ ಮಿಶ್ರಣ ಮಾಡಿ, ಪುಡಿಮಾಡಿಕೊಳ್ಳುತ್ತಾರೆ. ಬಿತ್ತನೆಯ ಸಮಯದಲ್ಲಿ ನಾಲ್ಕು ಕೆ.ಜಿ. ಮಿಶ್ರಣದಲ್ಲಿ 20 ಕೆ.ಜಿ. ಬಿತ್ತನೆ ಬೀಜಗಳನ್ನು ಬೆರೆಸುತ್ತಾರೆ. ಇದರಿಂದ ಗೆದ್ದಲುಗಳು ನಿಯಂತ್ರಣಗೊಳ್ಳುವುದಲ್ಲದೇ ಮಣ್ಣಿನ ಫಲವತ್ತತೆಯೂ ವೃದ್ಧಿಯಾಗುತ್ತದೆ ಎನ್ನಲಾಗಿದೆ.

(ವೈಜ್ಞಾನಿಕ ಹಿನ್ನೆಲೆ- ಹೊಂಗೆಯನ್ನು ಗೆದ್ದಲುಗಳ ನಿಯಂತ್ರಣಕ್ಕೆ ಬಳಸುವುದನ್ನು Bunders Joske; Haverkor Bertus and Hiemstra Wim (1996) ಇವರು ನಡೆಸಿದ ಸಂಶೋಧನೆಯಿಂದ ತಿಳಿದು ಬಂದಿದೆ. ಇದು Biopesticide Biotechnology, Building on Farmers' Knowledge, London and Basingstoke, Macmillan Education ಪುಸ್ತಕದಲ್ಲಿ ದಾಖಲಾಗಿದೆ.)



ಅರಿಶಿನ ಗಿಡದ ಕಪ್ಪು ಚುಕ್ಕೆ ರೋಗಕ್ಕೆ ಹೊಂಗೆ

ಚಳಿಗಾಲದಲ್ಲಿ ಅರಿಶಿನ ಗಿಡದ ರೆಂಬೆಗಳ ಮೇಲೆ ಕಪ್ಪು ಚುಕ್ಕೆಗಳು ಕಾಣಿಸಿ ಕೊಳ್ಳುತ್ತವೆ. ಇದರಿಂದ ಗಿಡದ ಬೆಳವಣಿಗೆಯೂ ಕುಂಠಿತಗೊಳ್ಳುತ್ತದೆ. ಇದಕ್ಕೆ ಪರಿಹಾರವಾಗಿ ಗುಜರಾತಿನ ದುಂಗಾರ್‌ಪುರ್ ಜಿಲ್ಲೆಯವರಾದ ದಹಯಭಾಯಿ ಕೆ. ಕತರಾರವರು ತಮ್ಮ ಒಂದು ಎಕರೆ ಭೂಮಿಗೆ ಆರರಿಂದ ಏಳು ಕ್ವಿಂಟಾಲ್ ಹರಳಿಂಡಿ ಮತ್ತು 100 ಕೆ.ಜಿ. ಹೊಂಗೆ *(Pongamia pinnata (L.) Pierre.)* ಎಲೆಗಳನ್ನು ಮಿಶ್ರಣಮಾಡಿ ಹೊಲದಲ್ಲಿ ಹರಡಿ ನೀರನ್ನು ಹಾಕುತ್ತಾರೆ. ನಂತರ ಒಣಗಿದ ಮೇಲೆ ಎರಡು ಬಾರಿ ಉಳುಮೆಮಾಡಿ ಅರಿಶಿನವನ್ನು ಬಿತ್ತುತ್ತಾರೆ. ಈ ತರಹದ ಉಪಚಾರವು ಕಪ್ಪು ಚುಕ್ಕೆ ರೋಗವನ್ನು ತಡೆಗಟ್ಟುವುದಲ್ಲದೆ ಗೆದ್ದಲು ಸಹ ನಿವಾರಣೆಯಾಗುತ್ತದೆ ಮತ್ತು ಫಸಲು ಚೆನ್ನಾಗಿ ಬರುತ್ತದೆ ಎಂದು ಹೇಳಿದ್ದಾರೆ. ಈ ಕ್ರಮವನ್ನು ದಹಯಭಾಯಿಯವರು ತಮ್ಮ ತಾತನವರಾದ ಕಬಾಭಾಯಿಯವರಿಂದ ತಿಳಿದುಕೊಂಡಿದ್ದಾರೆ.

(ವೈಜ್ಞಾನಿಕ ಹಿನ್ನೆಲೆ – ಕಪ್ಪು ಚುಕ್ಕೆ ರೋಗವು ಶಿಲೀಂಧ್ರ ಕಾರಣದಿಂದ ಬರುತ್ತದೆ. ಹರಳಿನಲ್ಲಿ ಇದನ್ನು ತಡೆಯುವ ಗುಣಗಳಿವೆ ಎಂದು Khan M. R. ; Ndaalio, G; Nkunya, M.H.H.; and Wevers H.(1978): ಇವರು ನಡೆಸಿದ ಸಂಶೋಧನೆಯಾದ Studies on the rationale of African traditional medicine : Preliminary screening of medicinal plants for anti-gonococci activity ಎನ್ನುವ ವಿಷಯವು Pakistan Journal of Scientific and Industrial Research, 21 (5/6: 189-192) ಎಂಬ ಪತ್ರಿಕೆಯಲ್ಲಿ ದಾಖಲಾಗಿದೆ. ಹೊಂಗೆ ಗಿಡವು ಸಹ ಶಿಲೀಂಧ್ರ ನಿರೋಧಕ ಗುಣಗಳನ್ನು ಹೊಂದಿದೆ ಎಂದು Bhakuni, D.S.; Goel, A.K.; (1988) ಇನ್ನು ಮುಂತಾದವರು ನಡೆಸಿದ ಸಂಶೋಧನೆಯಾದ Screening of Indian Plants for Biological Activity, Central Drug Research Institute, Lucknow, U.P., India, Indian Journal of Experimental Biology, 26 (11):883-904) ಎಂಬ ಪತ್ರಿಕೆಯಲ್ಲಿ ದಾಖಲಾಗಿದೆ.)

ಮೂಲ: ಹನಿ ಬೀ, Vol 19(3) ಜುಲೈ – ಸೆಪ್ಟೆಂಬರ್ 2008

ಮಾವಿನ ಗಿಡಕ್ಕೆ ಸಾವಯವ ಕಷಾಯ

ಗುಜರಾತಿನ ಜುನ್‌ಗಡ್ ಜಿಲ್ಲೆಯ, ತಲಾಲ ತಾಲೂಕಿನ, ಹದ್ಮಾಟಿಯ ಕರಮ್‌ಸಿಂಹಭಾಯಿಯವರು ಮಾವಿನ ಗಿಡಗಳಿಗೆ ಒಂದು ಸಾವಯವವಾಗಿ ಕಷಾಯವನ್ನು ಬಳಸಿ ಉತ್ತಮ ಇಳುವರಿಯನ್ನು ಪಡೆಯುತ್ತಿದ್ದಾರೆ. ಸ್ಥಳೀಯವಾಗಿ 'ಬಂದಿ' ಎಂದು ಕರೆಯಲಾಗುವ ರೋಗದ ಕಾರಣದಿಂದ ಮಾವಿನ ಗಿಡವು ಒಣಗಿ ಹೋಗುತ್ತದೆ. ಪರಿಣಾಮವಾಗಿ ಹೂ ಬಿಡುವುದು ಕೂಡಾ ಗಣನೀಯವಾಗಿ ಕಡಿಮೆಯಾಗುತ್ತದೆ. ಕಾಯಿಯಾಗುವ ಸಮಯದಲ್ಲೂ ಕೀಟಗಳ ಹಾವಳಿಯಿಂದ ಉತ್ಪನ್ನವೂ ಕಡಿಮೆಯಾಗಿ ಲಾಭವೂ ಸಿಗುವುದಿಲ್ಲ. ಕರಮ್‌ಸಿಂಹಭಾಯಿಯವರು ಈ ಸಮಸ್ಯೆಗೆ ಪರಿಹಾರ ಕಂಡುಹಿಡಿಯಲು 15 ವರ್ಷದಿಂದಲೂ ಶ್ರಮ ಪಟ್ಟಿದ್ದಾರೆ. ಇತರ ರೈತರು ಕಾಂಪೋಸ್ಟ್ ಮತ್ತು *DAP* ಬಳಸುತ್ತಿದ್ದು ಅದರಿಂದಲೂ ತೃಪ್ತಿಕರವಾದ ಫಲಿತಾಂಶ ದೊರೆತಿಲ್ಲ. ಕರಮ್‌ಸಿಂಹ ಭಾಯಿಯವರು ಉಷ್ಣವನ್ನು ಹೊರಸೂಸುವಂತ ವಸ್ತುಗಳನ್ನು ಫಲ ಬಿಡದೇ ಇರುವ ಮತ್ತು ರೋಗ ಪೀಡಿತ ಗಿಡಗಳಿಗೆ ಉಪಯೋಗಿಸುವ ಯೋಚನೆ ಮಾಡಿದರು ಮತ್ತು ಪ್ರಯೋಗಗಳಿಂದ ಹಾಗೂ ಸೂಕ್ಷ್ಮ ಅವಲೋಕನದಿಂದ ಖರ್ಚಿಲ್ಲದೇ ಇರುವಂತ ವಿಧಾನವನ್ನು ಅಭಿವೃದ್ಧಿಪಡಿಸಿದರು. ಇದಕ್ಕಾಗಿ ಅವರು ಅಂಕೋಲೆ *(Alangium salvifolium (L.f.) Wang)* ಮತ್ತು ಕೆಲವು ವಿಶೇಷ ಗಿಡಮೂಲಿಕೆಗಳನ್ನು ಜೇನು, ಶುಂಠಿ ಮತ್ತು ಉಪ್ಪಿನ ಜೊತೆ ಸೇರಿಸಿ ಮಾವಿನ ಗಿಡಗಳಿಗೆ ಉಪಯೋಗಿಸಿ ಉತ್ತಮ ಫಲಿತಾಂಶವನ್ನು ಪಡೆದಿದ್ದಾರೆ. ಈ ವಿಧಾನವನ್ನು ಅವರು ಐದು ವರ್ಷಗಳಿಂದ ಅನುಸರಿಸುತ್ತಿದ್ದಾರೆ. ಮೊದಲನೇ ವರ್ಷದಲ್ಲಿ ಮಿಶ್ರಣವನ್ನು ಒಂದು ಮರಕ್ಕೆ ಬಳಸಿ, ಅದರಲ್ಲಿ ಉತ್ತಮ ಹೂ ಬಿಡುವುದನ್ನು ಗಮನಿಸಿದ್ದರು. ಎರಡನೇ ವರ್ಷದಲ್ಲಿ ಅವರ ತೋಟದ ಅರ್ಧದಷ್ಟು ಮರಗಳಲ್ಲಿ ಉಪಯೋಗಿಸಿದಾಗ ಹಿಂದಿನ ಫಲಿತಾಂಶವನ್ನೇ ಪಡೆದರು. ಹೀಗಾಗಿ ಅವರು ತಮ್ಮ ತೋಟದ ಎಲ್ಲಾ ಮರಗಳಿಗೂ ಈ ವಿಧಾನವನ್ನೇ ಅನುಸರಿಸಿದರು. ಮೊದಲು ಎಕರೆಗೆ 4 ರಿಂದ 6 ಕ್ವಿಂಟಾಲ್ ಮಾವನ್ನು ಪಡೆಯುತ್ತಿದ್ದ ಅವರು ಈಗ ಸರಾಸರಿ 13 ಕ್ವಿಂಟಾಲ್‌ನಷ್ಟು ಇಳುವರಿಯನ್ನು ಪಡೆಯುತ್ತಿದ್ದಾರೆ. ಅವರು ಮಿಶ್ರಣವನ್ನು ಸುಗ್ಗಿಕಾಲ ಮುಗಿದ ಮೂರು ತಿಂಗಳ ನಂತರ ಪ್ರತಿ ಗಿಡಕ್ಕೆ 500ಗ್ರಾಂ ನಂತೆ ವರ್ಷಕ್ಕೆ ಒಂದು ಸಾರಿ ಕೊಡುತ್ತಾರೆ. ಅವಶ್ಯಕತೆಗೆ ತಕ್ಕಂತೆ ಮಿಶ್ರಣದ ಪ್ರಮಾಣವನ್ನು ಹೆಚ್ಚಿಗೆ ಕೊಡಬಹುದು ಎನ್ನುತ್ತಾರೆ. ಈ ವಿಧಾನದಿಂದ ಯಾವುದೇ ರೀತಿಯ ದುಷ್ಪರಿಣಾಮಗಳು ಕಂಡುಬರುವುದಿಲ್ಲವೆಂದು ಕರಮ್‌ಸಿಂಹಭಾಯಿಯವರು ಹೇಳಿದ್ದಾರೆ. ಹೆಚ್ಚಿನ ಉತ್ಪನ್ನಕ್ಕಾಗಿ ಮಾವಿನ ಗೊರಟೆಯನ್ನು ಅಂಕೋಲೆ ಹಣ್ಣಿನ ರಸದಲ್ಲಿ ನೆನೆಸಿ ಉಳುಮೆ ಮಾಡಿದರೆ ಉತ್ತಮ ಎನ್ನಲಾಗಿದೆ.

ಮೂಲ: ಹನಿ ಬೀ, Vol 19(2) ಎಪ್ರಿಲ್ – ಜೂನ್ 2008

ಮಾವಿನ ಸಮಗ್ರ ರಕ್ಷಣೆ

ಮಾವಿನ ಬೂದಿರೋಗಕ್ಕೆ ಚಿತ್ರದುರ್ಗದ ಮಹಾವೀರ್ ಮತ್ತು ಬೆಂಗಳೂರಿನ ಗೋವಿಂದ ಕಬಾಡಿಯವರು ತಮ್ಮದೇ ಆದಂತಹ ಎರಡು ವಿಧಾನಗಳನ್ನು ಅನುಸರಿಸುತ್ತಿದ್ದಾರೆ. ಮಹಾವೀರ್‌ರವರು ಮೊದಲನೇ ಹಂತವಾಗಿ ಫಸಲು ಬಂದ ನಂತರ ಸಗಣಿ ಮತ್ತು ಗಂಜಲದ ಮಿಶ್ರಣವನ್ನು ಮರದ ರಂಧ್ರಗಳಿಗೆ ಮತ್ತು ಮೇಲ್ಮೈಗೆ ತುಂಬುತ್ತಾರೆ. ಈ ವಿಧಾನವನ್ನು ವರ್ಷಕ್ಕೆ ಒಮ್ಮೆ ಮಾತ್ರ ಮಾಡುತ್ತಾರೆ. ನಂತರ ಜೀವಾಮೃತವನ್ನು 10 ಲೀಟರ್ ಗಂಜಲ, 10 ಕಿಲೋ ಸಗಣಿ, 2 ಕಿಲೋ ಬೇಳೆಕಾಳಿನ ಹಿಟ್ಟು, 2 ಕಿಲೋ ಕಪ್ಪು ಬೆಲ್ಲ, 2 ಹಿಡಿ ಮಣ್ಣು ಇವುಗಳನ್ನು 200 ಲೀ. ನೀರಿಗೆ ಕೊಳೆ ಹಾಕಿ 9 ದಿನಗಳ ನಂತರ ಫಿಲ್ಟರ್ ಮಾಡಿ ತಯಾರಿಸಿ ಕೊಳ್ಳುತ್ತಾರೆ. ಇದನ್ನು 20 ಅಥವಾ 30 ದಿನಗಳಿಗೊಮ್ಮೆ ಹೂ ಬಿಡುವ ಮೊದಲು ಮರಗಳಿಗೆ ಸಿಂಪಡಿಸಿದರೆ ಬೂದಿ ರೋಗವನ್ನು ತಡೆಯಬಹುದು ಎನ್ನಲಾಗಿದೆ. ಹೂ ಬಿಟ್ಟ ನಂತರವೂ ಬೂದಿರೋಗ ಕಾಣಿಸಿಕೊಂಡರೆ 15 ದಿನಗಳ ಅಂತರದಲ್ಲಿ ಎರಡು ಬಾರಿ ಹುಳಿ ಮಜ್ಜಿಗೆಯನ್ನು ಸಿಂಪಡಿಸುತ್ತಾರೆ. ಕಾಯಿ ಕಚ್ಚಿಕೊಂಡ ನಂತರ 'ಅಗ್ನಿ ಅಸ್ತ್ರ' ಮಿಶ್ರಣವನ್ನು 5 ಕೆ.ಜಿ. ಬೇವಿನ ಎಲೆ, 2 ಕೆ.ಜಿ. ಹೊಗೆಸೊಪ್ಪು, 3 ಕೆ.ಜಿ. ಬೆಳ್ಳುಳ್ಳಿ, 4 ಕೆ.ಜಿ. ಚಿಕ್ಕ ಹಸಿಮೆಣಸಿನಕಾಯಿ, 20 ಲೀ. ಜವಾರಿ ಆಕಳ ಗಂಜಲ ಇವುಗಳನ್ನು 20 ದಿನಗಳು ನೆನೆಸಿ ನಂತರ ಸೋಸಿ ತಯಾರಿಸಿ ಕೊಳ್ಳುತ್ತಾರೆ. ಇದನ್ನು 200 ಲೀ. ನೀರಿಗೆ ಸೇರಿಸಿ ಎರಡು ಬಾರಿ ಸಿಂಪಡಿಸಿದರೆ ಬಿಳಿಸೊಳ್ಳೆಗಳ ಸಮಸ್ಯೆಯನ್ನು ತಡೆಗಟ್ಟಬಹುದಂತೆ. ಹಾಗೇ ಕಾಯಿ ನಿಂಬೆ ಗಾತ್ರವಾದಾಗ ಅವುಗಳು ದಪ್ಪಗಾಗಲು ಒಣ ತೆಂಗಿನ ಕಾಯಿಯ ನೀರನ್ನು 100 ಲೀ. ನೀರಿಗೆ ಸೇರಿಸಿ ಸಿಂಪಡಿಸುತ್ತಾರೆ. ನಂತರ ಕಾಯಿಗಳು ಬಲಿತ ಮೇಲೆ ಎಳ್ಳು ಮತ್ತು ಗೋಧಿಯನ್ನೊಳಗೊಂಡ ಒಂಬತ್ತು ರೀತಿಯ ಧಾನ್ಯ ಗಳನ್ನು ಮೊಳಕೆ ಬರಿಸಿ ಅದನ್ನು ರುಬ್ಬಿ ನೀರಿಗೆ ಸೇರಿಸಿ ಸಿಂಪಡಿಸುವುದರಿಂದ ಅವುಗಳ ಹೊಳಪು ಅಧಿಕವಾಗುತ್ತದೆಯಂತೆ. ಮಹಾವೀರ್‌ರವರು ಮಾವಿನ ಜೊತೆ ವೆಲ್ವೆಟ್ ಬೀನ್ಸನ್ನು ಬೆಳೆಸುತ್ತಾರೆ. ಇದು ಮುಚ್ಚಿಗೆ *(mulching)* ಯಾಗಿ ಕಾರ್ಯ ನಿರ್ವಹಿಸುತ್ತದಲ್ಲದೆ ತೇವಾಂಶವನ್ನು ಕಾಪಾಡುತ್ತದೆ. ಉದುರಿದ ಎಲೆಗಳು ಎರೆಹುಳು ಗಳಿಗೆ ಆಹಾರವಾಗಿ ಹಾಗೂ ಗೊಬ್ಬರವಾಗಿ ಉಪಯೋಗ ವಾಗುತ್ತದೆ. ಇವರು ಹುರುಳಿ, ತೊಗರಿ, ಅಲಸಂದೆ, ಚೆಂಡು ಹೂ, ಸೀತಾಫಲ, ನುಗ್ಗೆ ಸಸಿಗಳನ್ನು ಮಾವಿನ ಜೊತೆ ಬೆಳೆಸಿ ಅಧಿಕ ಲಾಭವನ್ನು ಪಡೆದು ಕೊಳ್ಳುತ್ತಿದ್ದಾರೆ.

ಬೆಂಗಳೂರಿನ ಗೋವಿಂದ ಕಬಾಡಿಯವರು ಮೊದಲ ಹಂತವಾಗಿ ಮಾವಿನ ಫಸಲು ಬಂದ ನಂತರ ಗಿಡಗಳಲ್ಲಿ ಕಾಯಿ ಬಿಟ್ಟು ಉಳಿದಿರುವ ರೆಂಬೆ, ಕಡ್ಡಿಗಳನ್ನು ಕಿತ್ತುಹಾಕಿ ಗಾಳಿ ಹಾಗೂ ಸೂರ್ಯನ ಕಿರಣಗಳು ಚೆನ್ನಾಗಿ ಕಾಂಡಕ್ಕೆ ಬೀಳುವಂತೆ ಮಾಡುತ್ತಾರೆ. ನಂತರ ವರ್ಷಕ್ಕೆ ಎರಡು ಬಾರಿ ಪ್ರತಿ ಗಿಡದ ಪಾತಿಯನ್ನು ಚೆನ್ನಾಗಿ ಅಗೆದು ಎರೆಹುಳು ಗೊಬ್ಬರ, ಹಟ್ಟಿಗೊಬ್ಬರ, ಕೋಳಿಗೊಬ್ಬರ, ಮೀನಿನ ಗೊಬ್ಬರ ಗಳನ್ನು ಮಿಶ್ರಣಮಾಡಿ ಹಾಕುತ್ತಾರೆ. ಬೂದಿ ರೋಗ ನಿಯಂತ್ರಿಸಲು ಅರಿಸಿನ ಕೊಂಬುಗಳನ್ನು ಎರಡು ದಿನ ನೀರಿನಲ್ಲಿ ನೆನೆಸಿ, ರುಬ್ಬಿ ನೀರಿನೊಂದಿಗೆ ಸೇರಿಸಿಕೊಂಡು ಮೊಗ್ಗು ಕಾಣಿಸಿಕೊಂಡ ಮೊದಲ ವಾರದಲ್ಲಿ ಮೊಗ್ಗು ಅರಳುವ ಮುನ್ನ ಸಿಂಪಡಿಸುತ್ತಾರೆ. ಹೂ ಉದುರದೇ ಇರುವುದಕ್ಕೆ ಮೂರನೇ ವಾರದಲ್ಲಿ ಬೇವಿನ ಎಣ್ಣೆ, ಬೆಳ್ಳುಳ್ಳಿ, ಮೆಣಸಿನಕಾಯಿ, ಲೋಳೆಸರದ ರುಬ್ಬಿದ ಮಿಶ್ರಣವನ್ನು 24 ಗಂಟೆಗಳ ನಂತರ ಮರಕ್ಕೆ ಸಿಂಪಡಿಸುತ್ತಾರೆ. ಐದನೇ ವಾರದಲ್ಲಿ ಪಂಚಗವ್ಯ ವನ್ನು 5 ಕೆ.ಜಿ. ಸಗಣಿ, 5 ಲೀ. ನೀರು, 2 ಲೀ. ಹಸುವಿನ ಹಾಲು, 2 ಲೀ. ಮೊಸರು, ಒಂದು ಲೀ. ತುಪ್ಪ ಮತ್ತು 2 ಲೀ. ಕಬ್ಬಿನ ರಸವನ್ನು ಮಣ್ಣಿನ ಮಡಿಕೆಯಲ್ಲಿ ಹಾಕಿ, ಚೆನ್ನಾಗಿ ಮಿಶ್ರಣ ಮಾಡಿ ತಯಾರಿಸಿ ಮೂರು ವಾರಗಳ ನಂತರ 100 ಲೀ. ನೀರಿನಲ್ಲಿ 2 ಲೀ. ನಂತೆ ಬೆರೆಸಿ ಸಿಂಪಡಿಸುತ್ತಾರೆ. ಕಾಯಿ ಕಚ್ಚಲು ಶುರುವಾದಾಗ ಹಾಗೂ ಕಾಯಿಗಳು ಉದುರದೇ ಇರುವುದಕ್ಕೆ ಬೇವು, ಲಕ್ಕಿ, ಔಡಲ, ಲಂಟಾನ, ಸೀತಾಫಲ, ವಿಷಂಧಾರಿ, ಹೊಂಗೆ, ದತ್ತೂರಿ, ನೀಲಗಿರಿ, ಹೊಗೆಸೊಪ್ಪು, ಪಾರ್ಥೇನಿಯಂ ಇತರೆ ಕಹಿ ಗುಣದ ಎಲೆಗಳನ್ನು ರುಬ್ಬಿ ಮಿಶ್ರಣ ತಯಾರಿಸಿ ಗಿಡಗಳಿಗೆ ಸಿಂಪಡಿಸುತ್ತಾರೆ.

ಹೆಚ್ಚಿನ ಮಾಹಿತಿಗೆ ಗೋವಿಂದ ಕಬಾಡಿಯವರನ್ನು 9844064995ಗೆ ಮತ್ತು ಮಹಾವೀರ್ ರವರನ್ನು 9448122700ಗೆ ಸಂಪರ್ಕಿಸಬಹುದು. ಮೂಲ: ವಿಜಯಕರ್ನಾಟಕ, 9 ಜನವರಿ, 2008

ಸಂಧಿವಾತದ ಉಪಶಮನ

ಗುಜರಾತಿನ, ದಾಹೋಡ್ ಜಿಲ್ಲೆಯ, ಧಾನ್‌ಪುರ್ ತಾಲೂಕಿನ, ಮೆಂಧಾರಿ ಹಳ್ಳಿಯವರಾದ ಮನಹರ್‌ಭಾಯಿ ಚೌಹನ್‌ರವರು ಸಂಧಿವಾತದ ನೋವಿನ ಉಪಶಮನಕ್ಕೆ ಚಂಗಲಕೋಷ್ಠವನ್ನು *(Costus speciosus (J.Konig) Sm.)* ಉಪಯೋಗಿಸುತ್ತಾರೆ. ಇದಕ್ಕಾಗಿ ಅವರು 50 ಗ್ರಾಂ ನಷ್ಟು ಚಂಗಲಕೋಷ್ಠದ ಬೇರನ್ನು ನೀರಿನಲ್ಲಿ ಕುದಿಸಿಕೊಳ್ಳುತ್ತಾರೆ. ಬಂದಿರುವಂತ ಕಷಾಯವನ್ನು ದಿನಕ್ಕೆ ಒಂದು ಸಾರಿಯಂತೆ ಒಂದು ವಾರ ತೆಗೆದುಕೊಂಡರೆ ಸಂಧಿವಾತವು ಪರಿಹಾರವಾಗುತ್ತದೆಂದು ಹೇಳಿದ್ದಾರೆ. ಮನಹರ್‌ಭಾಯಿಯವರು ಒಬ್ಬ ಧಾರ್ಮಿಕ ವ್ಯಕ್ತಿಯಾಗಿದ್ದು, ಸ್ಥಳೀಯವಾಗಿ ದೊರೆಯುವ ಈ ರೀತಿಯ ಗಿಡಮೂಲಿಕೆಗಳನ್ನು ಬಳಸಿಕೊಂಡು ಸಂಧಿವಾತ ಮತ್ತು ಅಜೀರ್ಣದಿಂದ ನರಳುತ್ತಿರುವವರಿಗೆ ಚಿಕಿತ್ಸೆಯನ್ನು ನೀಡುತ್ತಾರೆ. ಈ ರೀತಿಯ ಚಿಕಿತ್ಸೆಯನ್ನು ಅವರು 14 ವರ್ಷದಿಂದಲೂ ಮಾಡುತ್ತಾ ಬಂದಿದ್ದಾರೆ.

(ವೈಜ್ಞಾನಿಕ ಹಿನ್ನೆಲೆ– ಚಂಗಲ ಕೋಷ್ಠದ ಬೇರುಗಳು ತೀಕ್ಷ್ಣವಾದ ಮತ್ತು ಕಹಿಯಾದ ಗುಣವನ್ನು ಹೊಂದಿದ್ದು, ಉರಿಯುವಿಕೆ ಮತ್ತು ಕೀಲುಗಳ ಉರಿಯೂತದ ಶಮನಕ್ಕೆ ಉಪಯೋಗಿಸಬಹುದಾಗಿದೆ ಎಂದು Kirtikar KR & Basu BD ಇವರ Indian Medicinal Plant Vol. IV: 2440-41 ಎಂಬ ಪತ್ರಿಕೆಯಲ್ಲಿ ತಿಳಿಸಲಾಗಿದೆ.)

ಕಣ್ಣು ಚಿಟ್ಟೆಗೆ ಪರಿಹಾರ

ಮಹಾರಾಷ್ಟ್ರದ, ನಾಸಿಕ್ ಜಿಲ್ಲೆಯ, ರಾಮದಾಸ್ ಪಟೇಲ್‌ರವರು ಕಣ್ಣು ಕುರುವಿಗೆ, ಮೆಣಸಿನ ಕಾಳು *(Piper nigrum L.)* ಗಳನ್ನು ಕಲ್ಲಿನ ಮೇಲೆ ನೀರು ಹಾಕಿ ತೇಯ್ದು ಕುರುವಿನ ಮೇಲೆ ಹಚ್ಚಬೇಕು ಎನ್ನುತ್ತಾರೆ. ಈ ರೀತಿ ದಿನಕ್ಕೆ ಒಂದು ಅಥವಾ ಎರಡು ಸಲ, ಏರಡರಿಂದ ಮೂರು ದಿನಗಳವರೆಗೆ ಹಚ್ಚಬೇಕು ಎನ್ನಲಾಗಿದೆ. ಇದನ್ನು ತಮ್ಮ ಹಿರಿಯವರಿಂದ ಕಲಿತಿರುವುದಾಗಿ ರಾಮದಾಸ್ ತಿಳಿಸಿದ್ದಾರೆ.

(ವೈಜ್ಞಾನಿಕ ಹಿನ್ನೆಲೆ : – ಔಷಧೀಯ ಗುಣಗಳನ್ನು ಹೊಂದಿರುವ ಮೆಣಸಿನ ಕಾಳುಗಳನ್ನು ಬಾಹ್ಯ ಮತ್ತು ಆಂತರಿಕವಾಗಿ ಉಪಯೋಗಿಸಲಾಗುತ್ತದೆ. ಇದರ ಚೂರ್ಣವನ್ನು ಹಚ್ಚು ವುದರಿಂದ ಊತ ಮತ್ತು ನೋವು ಕಡಿಮೆಯಾಗುತ್ತದೆ. ಅಲ್ಲದೆ ಮೊಡವೆಗಳಿಗೆ, ಕಣ್ಣು ಚಿಟ್ಟೆಗೆ ಮತ್ತು ಬೆಂದ ಗಾಯಗಳಿಗೆ ಪರಿಣಾಮಕಾರಿಯಾಗಿದೆ. ಹೆಚ್ಚಿನ ಮಾಹಿತಿಗೆ http://www.herbal cureindia.com ನೋಡಿರಿ)

ಆಮಶಂಕೆ ಮತ್ತು ಹೊಟ್ಟೆಯ ವ್ಯಾಧಿಗಳಿಗೆ ಚಿಕಿತ್ಸೆ

ಅರುಣಾಚಲ್ ಪ್ರದೇಶ್, ಪೂರ್ವಸಿನಾಗ್ ಜಿಲ್ಲೆಯ ಚಾರ್ಕುರ್ ಹಳ್ಳಿಯ ಮುಮ್‌ತಕ್ ಮೋದಿಯವರು ದಾಸವಾಳ ಜಾತಿಯ ಕೆಂಪು ಪುಂಡ್ರಿಕೆಯ *(Hibiscus sabdariffa L.)* ಹಣ್ಣುಗಳಿಂದ ತಯಾರಿಸಿದ ಚೂರ್ಣವನ್ನು ನೀರಿನಲ್ಲಿ ಮಿಶ್ರಣಮಾಡಿಕೊಂಡು ಆಮಶಂಕೆ ಮತ್ತು ಹೊಟ್ಟೆಯ ವ್ಯಾಧಿಗಳಿಗೆ ಉಪಯೋಗಿಸುತ್ತಾರೆ. ಈ ಕಷಾಯವನ್ನು 10 ಮಿ.ಲೀ. ನಷ್ಟು ದಿನಕ್ಕೆ ಎರಡು ಸಾರಿಯಂತೆ ಎರಡರಿಂದ ಮೂರು ದಿನಗಳವರೆಗೆ ಕೊಡಬೇಕು ಎನ್ನುತ್ತಾರೆ.

(ವೈಜ್ಞಾನಿಕ ಹಿನ್ನೆಲೆ: – ಕೆಂಪು ಪುಂಡ್ರಿಕೆ ಹೂವಿನ ಲೋಳೆಯಂತಹ ಗುಣವು ಜ್ವರ, ಆಮಶಂಕೆ ಮತ್ತು ಅತಿಭೇದಿಯನ್ನು ಗುಣಪಡಿಸುತ್ತದೆ ಎಂದು ತಿಳಿದುಬಂದಿರುತ್ತದೆ. (ವಿವರಕ್ಕೆ http://www.herbvideos.com /medi.htm ನೋಡಿರಿ) ಹಾಗೇ, ಒಣಗಿರು ವಂತ ಪುಷ್ಪಪಾತ್ರೆ ಮತ್ತು ಹೂವಿನ ಎಸಳುಗಳಿಂದ ತೆಗೆದಿರುವಂತ ಅಂಶವನ್ನು ಉಪ್ಪಿನೊಂದಿಗೆ ಉಪಯೋಗಿಸಿದರೆ ಮನುಷ್ಯರಲ್ಲಿ ಮತ್ತು ಪ್ರಾಣಿಗಳಲ್ಲಿ ಕಂಡುಬರುವ ಆಮಶಂಕೆ ಮತ್ತು ಅತಿಭೇದಿಯನ್ನು ಗುಣಪಡಿಸಲು ಸಹಕರಿಸುತ್ತದೆಎನ್ನಲಾಗಿದೆ. (ವಿವರಕ್ಕೆ http://www.cwis.org ನೋಡಿರಿ)


ಮೂಲ: ಹನಿ ಬೀ, Vol 19(1) ಜನವರಿ – ಮಾರ್ಚ್ 2008

ಹೊಟ್ಟೆ ಉಬ್ಬರಕ್ಕೆ ಆಲದ ಎಲೆ ಚಿಕಿತ್ಸೆ

ಗುಜರಾತಿನ, ದಾಹೋಡ್ ಜಿಲ್ಲೆಯ, ಲಿಮಖೇಡಾ ಊರಿನವರಾದ ಬಾಲವಂತ ಭಾಯಿಯವರು ಜಾನುವಾರುಗಳ ಹೊಟ್ಟೆಉಬ್ಬರಕ್ಕೆ ಆಲದ ಮರದ ಎಲೆಗಳಿಂದ ಚಿಕಿತ್ಸೆಯನ್ನು ಕೊಡುತ್ತಾರೆ. ಪ್ರಾಣಿಗಳಲ್ಲಿ ಹೊಟ್ಟೆ ಉಬ್ಬರವು ಅತಿಯಾದ ಉಷ್ಣದಿಂದ ಕಾಣಿಸಿಕೊಳ್ಳುತ್ತದೆ. ಇದರಿಂದ ಹೊಟ್ಟೆನೋವು ತೀವ್ರವಾಗಿ ಕಾಣಿಸಿಕೊಳ್ಳುವುದಲ್ಲದೇ ಉಸಿರಾಡುವುದಕ್ಕೂ ಕಷ್ಟಪಡುತ್ತಿರುತ್ತದೆ. ಈ ಸ್ಥಿತಿಗೆ ಒಳಗಾಗಿರುವ ಪ್ರಾಣಿಗಳ ಹೊಟ್ಟೆಯು ಊದಿಕೊಂಡಿದ್ದುನಿಧಾನವಾಗಿ ತಟ್ಟಿದರೆ ತಬಲದ ಶಬ್ದದಂತೆ ಕೇಳಿಸುತ್ತದೆ. ಸಮಾಧಾನವಿಲ್ಲದಂತೆ, ಉಸಿರಾಡುವುದಕ್ಕೂ ಕಷ್ಟಪಡುತ್ತಿರುತ್ತದೆ. ಮೆಲಕು ಹಾಕುವುದನ್ನು ನಿಲ್ಲಿಸುತ್ತದೆ. ಇವು ಹೊಟ್ಟೆ ಉಬ್ಬರದ ಲಕ್ಷಣಗಳಾಗಿವೆ. ಇದಕ್ಕೆ ಪರಿಹಾರವಾಗಿ ಬಾಲವಂತಭಾಯಿಯವರು ಎರಡರಿಂದ ಮೂರು ಕೆ.ಜಿ. ಆಲದ *(Ficus benghalensis L.)* ಎಲೆಗಳ ಬೂದಿಯನ್ನು 500 ಮಿ.ಲೀ. ಕಡಲೇಕಾಯಿ ಎಣ್ಣೆಯಲ್ಲಿ ಮಿಶ್ರಣ ಮಾಡಿ ದಿನಕ್ಕೆ ಎರಡು ಬಾರಿ ಕೊಡುತ್ತಾರೆ.

(ವೈಜ್ಞಾನಿಕ ಹಿನ್ನೆಲೆ: ಹೊಟ್ಟೆಯ ತೊಂದರೆಗಳಿಗೆ ಆಲದ ಮರದ ಎಲೆಗಳನ್ನು ಉಪಯೋಗಿಸ ಲಾಗುತ್ತದೆ ಎನ್ನುವ ವಿಚಾರವನ್ನು Sanyasi Rao M.L.; Varma Y.N.R. and Vijayakumar (2008): ಇವರು Ethno -veterinary Medicianal Plants of the Catchments Area of the River Papagni in the Chittoor and Ananthapur Districts of Andra Pradesh, India, Ethnobotanical Leaflets, Volume 12: Pages 217-226 ಎಂಬ ಲೇಖನದಲ್ಲಿ ತಿಳಿಸಿದ್ದಾರೆ.)

ಮೂಲ: ಹನಿ ಬೀ, Vol 19(3) ಜುಲೈ – ಸೆಪ್ಟಂಬರ್ 2008



ಹೊಟ್ಟೆ ಉಬ್ಬರಕ್ಕೆ ಮತ್ತೊಂದು ಚಿಕಿತ್ಸೆ

ಗುಜರಾತಿನ, ಗಾಂಧಿನಗರ ಜಿಲ್ಲೆಯ ಲಾಖಿಭಾಯಿ ನಾಗ್‌ಜಿಭಾಯಿ ದೇಸಾಯಿಯವರು ಗುಲಗಂಜಿ *(Abrus precatorius L.)*ಯನ್ನು ಉಪಯೋಗಿಸಿ ಜಾನುವಾರುಗಳ ಹೊಟ್ಟೆ ಊತವನ್ನು ನಿವಾರಿಸುತ್ತಾರೆ. ಲಾಖಿಭಾಯಿಯವರು 50ಗ್ರಾಂ ಗುಲಗಂಜಿಯ ಬೀಜಗಳನ್ನು ಪುಡಿಮಾಡಿ, ಎರಡು ಲೀಟರ್ ನೀರಿನಲ್ಲಿ ಮಿಶ್ರಣಮಾಡಿ ದನಗಳಿಗೆ ಕುಡಿಸುತ್ತಾರೆ. ನಂತರ 20 ನಿಮಿಷದೊಳಗೆ ಪರಿಹಾರ ಸಿಗುತ್ತದೆಂದು ಹೇಳಿದ್ದಾರೆ. ಒಂದು ಗಂಟೆಯೊಳಗೆ ಪರಿಹಾರ ಸಿಗದಿದ್ದಲ್ಲಿ ಇದನ್ನೇ ಪುನರಾವರ್ತನೆ ಮಾಡಬೇಕು ಎನ್ನುತ್ತಾರೆ.

(ವೈಜ್ಞಾನಿಕ ಹಿನ್ನೆಲೆ :- ಗುಲಗಂಜಿಯ ಬೀಜಗಳು ಸೂಕ್ಷ್ಮಜೀವಿ ನಾಶಕ, ಕಾಮೊತ್ತೇಜಕ, ಮೂತ್ರವರ್ಧಕ, ವಾಂತಿಕಾರಕ, ಕಫ ನಿವಾರಕ, ಮೃದು ಕಾರಕ, ಜ್ವರ ಕಡಿಮೆ ಮಾಡುವ, ಭೇದಿಗೆ ಔಷಧಿಯಾಗಿ, ವಿರೇಚಕ, ಶೀತಕರ, ಶೀತಲ, ವಿಷಹಾರಿಯಾಗಿ ಕೆಲಸ ಮಾಡುತ್ತದೆ ಎಂಬುದು ಈಗಾಗಲೇ ಸಾಬೀತಾಗಿದೆ. ನಾನಾತರದ ಕಾಯಿಲೆಗಳಾದ ತಲೆನೋವು, ಹಾವು ಕಡಿತಕ್ಕೆ, ಕ್ಯಾನ್ಸರ್, ಶೀತ, ಉದರಶೂಲೆ, ಅಪಸ್ಮಾರ, ಕೆಮ್ಮು, ಅತಿಭೇದಿ, ಜ್ವರ, ಲೈಂಗಿಕ ರೋಗ, ಜಾಂಡೀಸ್, ಮಲೇರಿಯಾ, ರಾತ್ರಿಕುರುಡು, ಕಣ್ಣುಬೇನೆ ಮತ್ತು ಸಂಧಿವಾತ ನಿವಾರಣೆಗೂ ಇದನ್ನು ಉಪಯೋಗಿಸಲಾಗುತ್ತಿದೆ. ದೀರ್ಘಕಾಲದ ಮೂತ್ರ ಜನಕಾಂಗದ ಊತಕ್ಕೆ ಮತ್ತು ಮಧುಮೇಹ ರೋಗ ಚಿಕಿತ್ಸೆಗೆ ಇದನ್ನು ವಿಶೇಷವಾಗಿ ಬಳಸಲಾಗುತ್ತಿದೆ.ವಿವರಕ್ಕೆ http://www.disabled-world.comನೋಡಿರಿ.)

ಮೂಲ: ಹನಿ ಬೀ, Vol 19(2) ಎಪ್ರಿಲ್ – ಜೂನ್ 2008

ಅತಿಭೇದಿಗೆ ಸೀಬೆಕಾಯಿ

ಅತಿಭೇದಿಯಿಂದ ನರಳುತ್ತಿರುವ ಕುರಿಗಳಿಗೆ ಗುಜರಾತಿನ ದಾಹೋಡ್ ಜಿಲ್ಲೆಯ, ಲಿಮ್‌ಖೇಡಾ ಊರಿನ ನವರತ್‌ಭಾಯಿ ವೆರ್‌ಸಿಂಗ್‌ಭಾಯಿ ಕೊಯ್ಲೀಯವರು ಸೀಬೆಕಾಯಿ ಗಿಡದ *(Psidium guajava)* ತೊಗಟೆಯನ್ನು ಉಪಯೋಗಿಸುತ್ತಾರೆ. ಔಷಧೋಪ ಚಾರಕ್ಕಾಗಿ ಇವರು ಸೀಬೆಗಿಡದ ತೊಗಟೆಯನ್ನು ಚೆನ್ನಾಗಿ ಅರೆದು, ಅದಕ್ಕೆ ಚಿಟಿಕೆಯಷ್ಟು ಪಟಕವನ್ನು *(alum)* ಮತ್ತು 100 ಮಿ.ಲೀ. ಅಡುಗೆ ಎಣ್ಣೆಯನ್ನು ಸೇರಿಸಿ ಮಾಡಿದ ಮಿಶ್ರಣವನ್ನು ಸೋಸಿ ಮೂರು ಗಂಟೆಗಳಿಗೊಮ್ಮೆ ಕೊಡುತ್ತಾರೆ.

(ವೈಜ್ಞಾನಿಕ ಹಿನ್ನೆಲೆ:- ಸೀಬೆಕಾಯಿ ಗಿಡವು ರೋಗ ಹರಡುವಂತ ಬ್ಯಾಕ್ಟೀರಿಯಾ (Salmonella virchow, Shigella flexneri and Enteropathogenic E. coli) ಗಳನ್ನು ತಡೆಹಿಡಿಯುವ ಗುಣವನ್ನು ಹೊಂದಿದೆ ಜೊತೆಗೆ ಸೀಬೆಯು ಹೊಟ್ಟೆಯ ಹಿಗ್ಗು, ಕುಗ್ಗುವ ಅಥವಾ ಮುದುರಿಕೊಳ್ಳುವ ಚಲನೆಗಳನ್ನು ಕಡಿಮೆ ಮಾಡುತ್ತದೆ ಎಂದು Lin.J.; Puckree,T.; Mvelase T.P. (2002); ಇವರ ಅಧ್ಯಯನ Anti- Diarrhoeal Evaluation of Some Medicinal Plants Used By Zulu Traditional Healers, Journal of Ethnopahrmacol, Volume 79: Pages 53-56 ದಲ್ಲಿ ತಿಳಿದು ಬಂದಿದೆ.)

ಮೂಲ: ಹನಿ ಬೀ, Vol 19(3) ಜುಲೈ – ಸೆಪ್ಟಂಬರ್ 2008

ಗಿಡ ಮೂಲಿಕೆಗಳ ಮತ್ತೊಂದು ಪರಿಹಾರ

ಅತಿಭೇದಿಯಿಂದ ನರುಳುತ್ತಿರುವ ಪ್ರಾಣಿಗಳಿಗೆ ಗುಜರಾತಿನ ವಡೋಧರ ಜಿಲ್ಲೆಯ ಪವಿಜೆಟ್‌ಪುರ್ ತಾಲೂಕಿನ ಪಟಿಯ ಊರಿನವರಾದ ರಾಥವಾ ಜಟನ್‌ಭಾಯಿ ಬಾಲುಭಾಯಿಯವರು ಗಿಡ ಮೂಲಿಕೆಗಳಿಂದ ಮತ್ತೊಂದು ಪರಿಹಾರವನ್ನು ಕಂಡುಕೊಂಡಿದ್ದಾರೆ. ಇದಕ್ಕಾಗಿ ಅವರು ಮುತ್ತುಗ *(Butea monosperma (Lam.) Taub.)*, ಜಂಬು ನೇರಳೆ *(rose - apple, Syzygium cumini L. or Eugenia jambolana Lam.)* ಮತ್ತು ತೇಗದ *(teak, Tectona grandis L.)* ಗಿಡದ ತೊಗಟೆ ಇವುಗಳನ್ನು 100ಗ್ರಾಂ ನಷ್ಟು ತೆಗೆದುಕೊಂಡು ಚೆನ್ನಾಗಿ ಪುಡಿಮಾಡಿ ಕೊಳ್ಳುತ್ತಾರೆ. ಈ ಮಿಶ್ರಣವನ್ನು ಒಂದು ಲೀಟರ್ ನೀರಿನಲ್ಲಿ ಅರ್ಧಗಂಟೆ ನೆನೆಯಲು ಬಿಡುತ್ತಾರೆ. ನಂತರ ನೀರನ್ನು ಸೋಸಿ ಬಂದಿರುವ ಮಿಶ್ರಣವನ್ನು ಅತಿಭೇದಿಯಿಂದ ನರಳುತ್ತಿರುವ ಪ್ರಾಣಿಗಳಿಗೆ ದಿನಕ್ಕೆ ಎರಡು ಬಾರಿಯಂತೆ ಎರಡು ದಿನ ಕೊಡುತ್ತಾರೆ. ಈ ಪದ್ಧತಿಯಿಂದ ಯಾವುದೇ ದುಷ್ಪರಿಣಾಮಗಳಾಗುವುದಿಲ್ಲವೆಂದು ಬಾಲುಭಾಯಿಯವರು ಹೇಳಿದ್ದಾರೆ.

(ವೈಜ್ಞಾನಿ ಕ ಹಿನ್ನೆಲೆ – ಮುತ್ತುಗ ಗಿಡದ ತೊಗಟೆಯಿಂದ ತೆಗೆದಿರುವಂತಹ ಎಥೆನಾಲಿಕ್ ಅಂಶವು ಅತಿಭೇದಿಯನ್ನು ನಿಯಂತ್ರಣಗೊಳಿಸುವ ಸಾಮರ್ಥ್ಯವನ್ನು ಹೊಂದಿದೆಯೆಂದು ಇಲಿಗಳ ಮೇಲೆ ನಡೆಸಿದ ಪ್ರಯೋಗಗಳಿಂದ ತಿಳಿದು ಬಂದಿದೆ. ಹಾಗೂ ಈ ಅಂಶವು ಹರಳೆಣ್ಣೆಯಿಂದ ಆಗುವ ಅತಿಭೇದಿಯನ್ನು ತಡೆಯುತ್ತದೆ ಅಲ್ಲದೆ ಇಂತಹ ತೊಗಟೆಯ ಮಿಶ್ರಣವನ್ನು ನೀಡಿದ ಮೇಲೆ ಪಚನ ಕ್ರಿಯೆಯ ಸಾಮರ್ಥ್ಯವು ವೃದ್ಧಿಸುತ್ತದೆ. ಇದನ್ನು ವೈಜ್ಞಾನಿಕವಾಗಿ ಅಭ್ಯಸಿಸಿ A.Gunakkunru ಮುಂತಾದವರು Journal of Ethnopharmacology, Volume 98, Issue 3, 26 April 2005, Pages 241 - 244, ಈ ಪತ್ರಿಕೆಯಲ್ಲಿ ದಾಖಲಿಸಿರುವರು. ಜಂಬು ನೇರಳೆ ಗಿಡದ ತೊಗಟೆಯು ದೇಹ ಬಲಗೊಳಿಸುವ ಗುಣವನ್ನು ಹೊಂದಿದ್ದು ಗಂಟಲಿನ ಹುಣ್ಣುಗಳಿಗೆ, ಅಜೀರ್ಣಕ್ಕೆ, ಅತಿಭೇದಿಗೆ ಮತ್ತು ಶ್ವೇತ ಪ್ರದರವೆಂಬ ಸ್ತ್ರೀಯರ ರೋಗಗಳಿಗೆ ಬಳಸಲಾಗುತ್ತದೆ. ತಾಜವಾಗಿರುವ ತೊಗಟೆಯ ರಸವನ್ನು ಮೇಕೆ ಹಾಲಿನೊಂದಿಗೆ ಅತಿಭೇದಿಗೆ ಕೊಡಲಾಗುತ್ತದೆ (ವಿವರಗಳಿಗೆ http://EzineArticles.com ನೋಡಿರಿ)


ಮೂಲ: ಹನಿ ಬೀ, Vol 19(2) ಎಪ್ರಿಲ್ – ಜೂನ್ 2008

ಕ್ರಿಮಿಗಳಿಂದ ಕೂಡಿದ ಗಾಯ ಗುಣಪಡಿಸುವುದು

ಜಾನುವಾರುಗಳು ಕ್ರಿಮಿಗಳಿಂದ ಕೂಡಿದ ಗಾಯಗಳ ಪರಿಣಾಮವಾಗಿ ತುಂಬಾ ನೋವಿನಿಂದ ನರಳುತ್ತಿರುತ್ತವೆ. ಇಂತಹ ಗಾಯಗಳಿಗೆ ಗುಜರಾತಿನ ಬನಸ್ಕಾಂತ ಜಿಲ್ಲೆಯ ರಘುಭಾಯಿ ಮಷರ್‌ಭಾಯಿ ರಾಬರಿಯವರು ಒಂದು ಚಿಕಿತ್ಸೆಯನ್ನು ಕೊಡುತ್ತಾರೆ. ಅವರು 200 ಗ್ರಾಂ ತೊಟ್ಲಗಿಡದ *(Capparis sp.)* ಎಳೆಯ ಕಡ್ಡಿಗಳನ್ನು ಹರಳೆಣ್ಣೆಯ ಜೊತೆ ಅರೆದು ಮಿಶ್ರಣವನ್ನು ಮಾಡಿಕೊಳ್ಳುತ್ತಾರೆ. ಈ ಮಿಶ್ರಣವನ್ನು ಗಾಯಗಳಿಗೆ ದಿನಕ್ಕೆ ಎರಡು ಸಾರಿಯಂತೆ ನಾಲ್ಕು ದಿನಗಳ ವರೆಗೆ ಹಚ್ಚುತ್ತಾರೆ.ಇದರಿಂದ ಯಾವುದೇ ರೀತಿಯ ದುಷ್ಪರಿಣಾಮಗಳಾಗುವುದಿಲ್ಲವೆಂದು ನರಸಿಭಾಯಿಯವರು ಹೇಳುತ್ತಾರೆ.

(ವೈಜ್ಞಾನಿಕ ಹಿನ್ನೆಲೆ:- ತೊಟ್ಲಗಿಡವು ಹುಣ್ಣುಗಳ ನಿವಾರಕ ಮತ್ತು ಗಾಯಗಳನ್ನು ಗುಣಪಡಿಸುವಂತಹ ಗುಣಗಳನ್ನು ಹೊಂದಿದೆ. ಇದನ್ನು ವೈಜ್ಞಾನಿಕವಾಗಿ Jiang, H E.;Li,C.S. (2007): ಇನ್ನು ಮುಂತಾದವರು The Discovery of Capparis spinosa L.(Cappardiaceae) in the Yanghai Tombs (2800 years B.P.) NW China, and its Medicinal Implications, Journal of Ethnopharmacology, Volume 113 (3) : Pages 409-420 ಎಂಬ ಪುಸ್ತಕದಲ್ಲಿ ಸೂಚಿಸಿದ್ದಾರೆ.)

ಮೂಲ: ಹನಿ ಬೀ, Vol 19(3) ಜುಲೈ – ಸೆಪ್ಟೆಂಬರ್ 2008




ಗಾಯಗಳಿಗೆ ಬಿಲ್ವಪತ್ರೆಯ ರಸಸಾರ

ಪ್ರಾಣಿಗಳಲ್ಲಿ ಹಲವು ಕಾರಣಗಳಿಂದ ಗಾಯಗಳು ಹೊರಗಿನ ಕೀಟಾಣುಗಳ ಪ್ರಭಾವಕ್ಕೆ ಒಳಗಾಗಿ ಉಲ್ಬಣಗೊಳ್ಳುವ ಸಾಧ್ಯತೆಗಳಿರುತ್ತದೆ. ಈ ರೀತಿಯಾಗುವುದನ್ನು ತಪ್ಪಿಸಲು ಗುಜರಾತಿನ ವಡೋಧರ ಜಿಲ್ಲೆಯ ಸಂಖೇದ ತಾಲೂಕಿನ ಆನಂದಪುರ್ ಊರಿನವರಾದ ಮಗನ್‌ಭಾಯಿ ನರಸಿಂಹಭಾಯಿ ಪಟೇಲ್‌ರವರು ಬಿಲ್ವಪತ್ರೆ *(Aegle marmelos Correa.)* ಯನ್ನು ಉಪಯೋಗಿಸುತ್ತಾರೆ. ಅವರು 250ಗ್ರಾಂ ಬಿಲ್ವದ ಎಲೆಗಳನ್ನು ಅರೆದು ಅದನ್ನು ಪ್ರಾಣಿಗಳ ಗಾಯಗಳ ಮೇಲೆ ದಿನಕ್ಕೆ ಮೂರು ಬಾರಿ ಲೇಪಿಸಿ ಗುಣಪಡಿಸುತ್ತಾರಂತೆ.

(ವೈಜ್ಞಾನಿಕ ಹಿನ್ನೆಲೆ :- ಬಿಲ್ವಪತ್ರೆಯ ಎಲೆಗಳು ರಕ್ತಶುದ್ಧಿಗೆ, ಜಂತು ಔಷಧವಾಗಿ ಹಾಗೂ ಕುಷ್ಠರೋಗ, ಚರ್ಮರೋಗಗಳಿಗೆ ಮತ್ತು ಹುಣ್ಣುಗಳ ಚಿಕಿತ್ಸೆಗೆ ಉಪಯೋಗಿಸಲಾಗುತ್ತದೆ. (ವಿವರಕ್ಕೆ http://www.nccsl.lk/ranosu/medicinal_plants.htm ನೋಡಿರಿ.) ಬಿಲ್ವಪತ್ರೆಯ ಎಲೆಗಳಿಂದ ತೆಗೆದಿರುವಂತ ಎಣ್ಣೆಯು ಶಿಲೀಂದ್ರ ನಿರೋಧಕ ಗುಣಗಳನ್ನು ಹೊಂದಿದೆ. ಅಲ್ಲದೆ ಶಿಲೀಂದ್ರದ ವಂಶಾಭಿವೃದ್ಧಿಯನ್ನು ನಿಯಂತ್ರಿಸುತ್ತದೆ. ಬಿಲ್ವ ಪತ್ರೆಯ ಎಲೆಗಳಲ್ಲಿನ ಎಣ್ಣೆಯ ಅಂಶವು ಫಂಗಸ್ ನಿರೋಧಕ ಗುಣ ಮತ್ತು ಚಲನೆಯನ್ನು ತಡೆಹಿಡಿಯುವ ಗುಣವನ್ನು ಹೊಂದಿದೆ ಎಂದು Journal of Ethnopharmacol. Volume 57(1): Pages 29-34 ಎಂಬ ಪತ್ರಿಕೆಯಲ್ಲಿ ಪ್ರಕಟವಾಗಿರುತ್ತದೆ.)

ಕಣ್ಣಿನ ಅಪಾರದರ್ಶಕತೆಗೆ ಆಲೂಗಡ್ಡೆಯ ಉಪಯೋಗ



ಜಾನುವಾರುಗಳು ಕಣ್ಣಿನ ಅಸ್ಪಷ್ಟತೆಯಿಂದ ಅಥವಾ ಮಬ್ಬಿನಿಂದ ಬಳಲುತ್ತಿದ್ದರೆ ಅಂತಹ ಕಣ್ಣುಗಳು ಬಿಳಿಯದಾಗಿ, ಪದೇ ಪದೇ ನೀರು ಸೋರುತ್ತಿರುತ್ತದೆ. ಆಗ ಕಣ್ಣು ತೆಗೆಯುವುದಕ್ಕೂ ತುಂಬಾ ತೊಂದರೆಯಾಗಿ ಅವುಗಳ ದೃಷ್ಟಿಯೂ ಸಹ ಮಸುಕಾಗಿ ಕಾಣಿಸುತ್ತದೆ. ಇಂತಹ ಕಣ್ಣಿನ ತೊಂದರೆಯನ್ನು ಗುಜರಾತಿನ, ಬನಸ್ಕಾಂತ ಜಿಲ್ಲೆಯ, ಅಮೀರ್‌ಗಡ ತಾಲೂಕಿನವರಾದ ಈಶ್ವರ್‌ಭಾಯಿ ದಹಯ ಭಾಯಿ ಪಟೇಲ್‌ರವರು ಆಲೂಗಡ್ಡೆಯ ರಸದಿಂದ ಗುಣಪಡಿಸುತ್ತಾರೆ. ಮೊದಲು ಆಲೂಗಡ್ಡೆಯನ್ನು ಸ್ವಚ್ಛವಾದ ಕಲ್ಲಿನ ಮೇಲೆ ತೇಯ್ದು ಶೇಖರಿಸಿದ ರಸವನ್ನು ಶುಭ್ರವಾದ ಬಟ್ಟೆಯಿಂದ ಸೋಸಿಕೊಳ್ಳುತ್ತಾರೆ. ಇಂತಹ ರಸವನ್ನು ಕಣ್ಣಿನೊಳಗೆ ದಿನಕ್ಕೆ ಎರಡು ಸಾರಿಯಂತೆ 7 ರಿಂದ 10 ದಿನಗಳವರೆಗೆ ಬಿಡುತ್ತಾರೆ. ಇದರಿಂದ ಯಾವುದೇ ರೀತಿಯ ದುಷ್ಪರಿಣಾಮಗಳಾಗುವುದಿಲ್ಲವಂತೆ.

(ವೈಜ್ಞಾನಿಕ ಹಿನ್ನೆಲೆ : – ಆಲೂಗಡ್ಡೆಯು ಪ್ರಮುಖವಾದ ಜೀವಸತ್ವ ಮತ್ತು ಖನಿಜಾಂಶಗಳಾದ ಜೀವಸತ್ವ C ಮತ್ತು B6, ಪೊಟ್ಯಾಷಿಯಂ, ಥಯಾಮಿನ್, ರೈಬೋಫ್ಲಾವಿನ್, ಫೋಲೇಟ್, ನಿಯಾಸಿನ್, ಮೆಗ್ನೇಷಿಯಂ, ಫಾಸ್ಫರಸ್, ಜಿಂಕ್ ಮತ್ತು ಕಬ್ಬಿಣಾಂಶಗಳನ್ನೊಳಗೊಂಡಿದೆ. ಈ ಜೀವ ಸತ್ವಗಳು ವೈದ್ಯಕೀಯ ಕ್ಷೇತ್ರದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಬಳಕೆಯಾಗುತ್ತಿದೆ. ವಿವರಕ್ಕೆ http://www.presstv.ir ನೋಡಿರಿ)

ನಿರಾಸಕ್ತ ಲೈಂಗಿಕತೆಗೆ ವಿಷಹೀರೆ

ಪ್ರಾಣಿಗಳಲ್ಲಿ ಕಾಣಿಸುವಂತ ನಿರಾಸಕ್ತ ಲೈಂಗಿಕ ಕಾಯಿಲೆಗೆ ಕಾರಣ ದೇಹದ ಆಂತರಿಕ ಉಷ್ಣ, ಖನಿಜಾಂಶಗಳ ಕೊರತೆ ಅಥವಾ ಜನನೇಂದ್ರಿಯಗಳ ಕಾಯಿಲೆಗಳು. ಈ ಕಾಯಿಲೆಯು ಗುಜರಾತಿನಲ್ಲಿ ಸಾಮಾನ್ಯವಾಗಿ ಕಂಡು ಬರುತ್ತದೆ. ಇದಕ್ಕೆ ಅಹಮದಾಬಾದ್ ಜಿಲ್ಲೆಯ, ಸುಜ್‌ಪುರ ಊರಿನವರಾದ 75 ವರ್ಷದ ರಾಬರಿ ಜಬರ್‌ಬೇನ್ ಧಾನಾಭಾಯಿಯವರು ವಿಷಹೀರೆ *(Luffa echinata Roxb.)* ಯನ್ನು ಔಷದೋಪಚಾರಕ್ಕಾಗಿ ಉಪಯೋಗಿಸುತ್ತಾರೆ. ಹಳದಿ ಹೂಗಳನ್ನು ಬಿಡುವ ಈ ಬಳ್ಳಿಯು ಮಳೆಗಾಲದಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ಇದರಲ್ಲಿ ಬಿಡುವಂತ ಹಣ್ಣುಗಳನ್ನು ಜಬರ್‌ಬೇನ್‌ರವರು ದಪ್ಪರೊಟ್ಟಿಯ ಜೊತೆಯಲ್ಲಿ ಐದರಂತೆ ದಿನಕ್ಕೆ ಎರಡು ಬಾರಿ 7 ರಿಂದ 8 ದಿನಗಳವರೆಗೆ ಕೊಡುತ್ತಾರೆ.

(ವೈಜ್ಞಾನಿಕ ಹಿನ್ನೆಲೆ : – ವಿಷಹೀರೆಯಲ್ಲಿರುವ ಸಾರವು ಲಿಪಿಡ್ ಪೆರಾಕ್ಸಿಡೇಶನನ್ನು ತಡೆಯುತ್ತದೆ ಮತ್ತು ಹೈಡ್ರಾಕ್ಸಿಲ್ ಧಾತುವನ್ನು ನಾಶಪಡಿಸುವ ಶಕ್ತಿಯನ್ನು ಹೊಂದಿದೆ ಎಂದು ಈಗಾಗಲೇ ದೃಢಪಟ್ಟಿರುತ್ತದೆ.)

ಮೂಲ: ಹನಿ ಬೀ, Vol 19(2) ಏಪ್ರಿಲ್– ಜೂನ್ 2008

ತಮಿಳುನಾಡಿನ ಮುರುಗನ್‌ರವರ ಪಶು ಚಿಕಿತ್ಸೆಗಳು

ತಮಿಳುನಾಡಿನ ದಿಂಡಿಗಲ್ ಜಿಲ್ಲೆಯ ತಾಂಗಾಚಿಅಮ್ಮಪಟ್ಟಿ ಊರಿನವರಾದ ಮುರುಗನ್‌ರವರು ಕಳೆದ 20 ವರ್ಷಗಳಿಂದ ಪ್ರಾಣಿಗಳಲ್ಲಿ ಕಂಡುಬರುವಂತ ಹಲವು ಕಾಯಿಲೆಗಳಿಗೆ ಗಿಡ ಮೂಲಿಕೆಗಳನ್ನು ಉಪಯೋಗಿಸಿಕೊಂಡು ಚಿಕಿತ್ಸೆ ನೀಡಿರುತ್ತಾರೆ. ಈ ವಿಧಾನಗಳನ್ನು ತಮ್ಮ ತಂದೆಯವರಿಂದ ಕಲಿತಿರುವರು. ಅವರೂ ಸಹ ಪಶು ಚಿಕಿತ್ಸಾ ತಜ್ಞರಾಗಿ ಪರಿಚಿತರಾಗಿರುವರು. ಮುರುಗನ್ ರವರ ಕೆಲವು ಚಿಕಿತ್ಸಾ ವಿಧಾನಗಳನ್ನು ಇಲ್ಲಿ ಕೊಡಲಾಗಿದೆ.

ಸೊರಗಿದ ಹಸುಗಳಿಗೆ

ನಿತ್ರಾಣವಾಗಿ ಸೊರಗಿದ ಹಸುಗಳಿಗೆ ಮುರುಗನ್‌ರವರು 100ಗ್ರಾಂ ಆಕಾಶ ಗರುಡ *(Corallocarpus epigaeus Benth.ex Hook.f.)*, ಕೈ ತುಂಬಾ ಈಶ್ವರೀಬೇರು *(Aristolochia indica L.)*ಗಿಡದ ಎಲೆಗಳು, 100ಗ್ರಾಂ ಅಶ್ವಗಂಧ *(Withania somnifera L.)* ಮತ್ತು ಎರಡು ಎಲೆ ಲೋಳೆಸರ *(Aloevera (L.) Burm.f.)* ಇವುಗಳನ್ನೆಲ್ಲಾ ಅರೆದು ವಿಶ್ರಣ ಮಾಡಿ ಅರ್ಧ ಲೀಟರಿನಷ್ಟು ಕಷಾಯವನ್ನು ತಯಾರಿಸಿಕೊಳ್ಳುತ್ತಾರೆ. ಇದನ್ನು ಮೂರು ದಿನಗಳವರೆಗೆ ಕುಡಿಸುತ್ತಾರೆ.

(ವೈಜ್ಞಾನಿಕ ಹಿನ್ನೆಲೆ - ಆಕಾಶಗರುಡ ಗಿಡವನ್ನು ಸಂಧಿವಾತದ ನಿವಾರಣೆಗೆ ಉಪಯೋಗಿಸಲಾಗುತ್ತದೆ ಎಂದು Sankar, S. R; Sinha, B.N. and Sukumar, E. (1993):ಇವರು Pharmacological Studies on Corallocarpus epigaeus tubers, Fitoterapia, Volume 64(2): Pages 171-173 ಎಂಬ ಪತ್ರಿಕೆಯಲ್ಲಿ ತಿಳಿಸಿದ್ದಾರೆ. ಅಶ್ವಗಂಧವು ಮೂಳೆಯೊಳಗಿನ ಕೊಬ್ಬಿನಾಂಶದ ಅಣುಕೋಶಗಳ ಪುನರುತ್ಪತ್ತಿಗೆ ಸಹಾಯ ಮಾಡುತ್ತದೆ. ಲೋಳೆಸರ ಪಿತ್ತಜನಕಾಂಗವು ಆರೋಗ್ಯವಾಗಿರಲು ಪ್ರೋತ್ಸಾಹಿಸುತ್ತದಲ್ಲದೇ ಶೀತಕ ವಸ್ತುವಾಗಿ ಕಾರ್ಯನಿರ್ವಹಿಸುತ್ತದೆ. ಈಶ್ವರೀಗಿಡವು ಅಜೀರ್ಣತೆಯನ್ನು ನಿವಾರಿಸುತ್ತದೆ ಮತ್ತು ಕ್ರಿಮಿನಾಶಕವಾಗಿದೆ ಎಂಬುದು Girach, R.D.; Aminuddin; Siddiqui, P.A.; Khan, S.A. (1994): ಇವರುಗಳುTraditional Plant Remedies among the Kondh of District Dhenkanal (Orissa), ಈ ವಿಶಯದ ಮೇಲೆ ನಡೆಸಿದ ಅಧ್ಯಯನದಿಂದ ತಿಳಿದು ಬಂದಿದೆ. ಇದು International Journal of Pharmacology, Volume 62 (3): Pages 209 - 214) ಎಂಬ ಪತ್ರಿಕೆಯಲ್ಲಿ ದಾಖಲಾಗಿದೆ.)

ಗರ್ಭಕೋಶ ಹೊರ ಬಂದಿರುವುದಕ್ಕೆ

ಕೆಲವು ಬಾರಿ ಹಸುಗಳಲ್ಲಿ ಗರ್ಭಾಶಯವು ಹೊರ ಜಾರಿರುತ್ತದೆ. ಇದನ್ನು ಸರಿಪಡಿಸಲು ಮುರುಗನ್‌ರವರು ಮುಟ್ಟಿದರೆ ಮುನಿಯ *(Mimosa pudica L.)* ಐದು ಗಿಡಗಳನ್ನು ಅರೆದು ತಯಾರಿಸಿದಂತಹ ಕಷಾಯವನ್ನು ಹಸುಗಳಿಗೆ ಕುಡಿಸುತ್ತಾರೆ. ಜೊತೆಗೆ ಅಳಲೇಕಾಯಿ *(Terminalia chebula Retz.)* ಹಣ್ಣುಗಳನ್ನು ಉಪಯೋಗಿಸುತ್ತಾರೆ. ಇದಕ್ಕಾಗಿ ಅವರು ಬೀಜ ತೆಗೆದಿರುವ ಅಳಲೇಕಾಯಿಗಳನ್ನು ಪುಡಿಮಾಡಿ ಹೊರ ಬಂದಿರುವ ಮಾಸು ಚೀಲದ ಮೇಲೆ ಸಿಂಪಡಿಸುತ್ತಾರೆ. ಸಿಂಪಡಿಸಿದ ಮಾಸು ಚೀಲವನ್ನು ಮೂರು ನಿಮಿಷ ಹಾಗೆಯೇ ಹಿಡಿದುಕೊಂಡು ನಂತರ ಅದರ ಮೂಲ ಸ್ಥಳದಲ್ಲಿ ಸೇರಿಸುತ್ತಾರೆ.

(ವೈಜ್ಞಾನಿಕ ಹಿನ್ನೆಲೆ - ಮುಟ್ಟಿದರೆ ಮುನಿ ಗಿಡವು ಸ್ತ್ರೀರೋಗಗಳನ್ನು ವಾಸಿಮಾಡುವ ಗುಣಗಳನ್ನು ಹೊಂದಿದೆ ಎಂದು Coe, F.G.; Anderson, G.J. (1996): ಇವರು Screening Of Medicinal Plants Used by The Garifuna of Eastern Nicaragua for Bioactive Compounds, J Ethnopharmacol, 53: 29-50 ಎಂಬ ಪತ್ರಿಕೆಯಲ್ಲಿ ತಿಳಿಸಿದ್ದಾರೆ. ಇದು ಈಸ್ಟ್ರೋಜನ್ ಹಾರ್ಮೋನ್ ನಿರೋಧಕವಾಗಿ ಇಲಿಗಳ ಮೇಲೆ ಕಾರ್ಯನಿರ್ವಹಿಸುತ್ತದೆ ಎಂದು Journal of Ecotoxicology and Environmental Monitoring, Volume 10(1): Pages 25-29 ಎಂಬ ಪತ್ರಿಕೆಯಿಂದ ತಿಳಿದುಬಂದಿದೆ. ಇದು ಪ್ರಾಣಿಗಳಲ್ಲಿ ಗರ್ಭಕೋಶ ಹೊರಬಂದಿರುವುದನ್ನು ಸರಿಪಡಿಸುವ ಸಾಮರ್ಥ್ಯವನ್ನು ಹೊಂದಿದೆ. ಅಳಲೇಕಾಯಿಯು ನೀರು ತುಂಬಿರುವಂತ ಊತವನ್ನು ಕಡಿಮೆಮಾಡುತ್ತದೆ ಎಂದು Lama, S.; Santra, S.C. (1979): ಇವರು Development of Tibetan Plant Medi cine, Sci cult.,Volume 45: Pages 262-265 ಎಂಬ ಪತ್ರಿಕೆಯಲ್ಲಿ ತಿಳಿಸಿದ್ದಾರೆ. ಅಲ್ಲದೆ ಸ್ತ್ರೀಯರಿಗೆ ಸಂಬಂಧಪಟ್ಟ ಈಸ್ಟ್ರೋಜನ್ ಹಾರ್ಮೋನಿನ ವಿರುದ್ಧವಾಗಿ ಮತ್ತು ಉರಿಯುವಿಕೆಯನ್ನು ಕಡಿಮೆಮಾಡುವ ಪರಿಣಾಮಕತ್ವ ಶಕ್ತಿಯನ್ನು ಹೊಂದಿರುವುದರಿಂದ ಹೊರ ಬಂದಿರುವ ಮಾಸುಚೀಲವನ್ನು ಗುಣಪಡಿಸುವ ಸಾಮರ್ಥ್ಯವನ್ನು ತೋರಿಸುತ್ತದೆ ಎನ್ನಲಾಗಿದೆ.)

ಹಸಿವಿಲ್ಲದಿರುವಿಕೆಗೆ

ಕೆಲವು ಬಾರಿ ಹಸುಗಳು ಸರಿಯಾಗಿ ತಿನ್ನುವುದಿಲ್ಲ ಹಾಗೂ ನಿರಾಸಕ್ತಿಯಿಂದ ಕೂಡಿರುತ್ತದೆ. ಇಂತಹ ಸಮಯದಲ್ಲಿ ಮುರುಗನ್‌ರವರು ಕತ್ತೆಕಿರುಬನ ಗಿಡ *(Aristolochia bracteolata L.)*, ನೆಲಾವರಿಕೆ *(Cassia angustifolia Vahl.)*, ಆವರಿಕೆ *(Cassia auriculata L.)* ಈ ಗಿಡಗಳ ಎಲೆಗಳನ್ನು ಕೈ ತುಂಬ ತೆಗೆದುಕೊಂಡು ಅರೆದು ತಯಾರಿಸಿದ ಕಷಾಯವನ್ನು ಕುಡಿಸುತ್ತಾರೆ.

(ವೈಜ್ಞಾನಿಕ ಹಿನ್ನೆಲೆ - ಕತ್ತೆಕಿರುಬನ ಗಿಡವು ಹಸಿವಾಗದಿರುವ ಕಾಯಿಲೆಯನ್ನು ನಿವಾರಿಸುವ ಗುಣಗಳನ್ನು ಹೊಂದಿದೆ . ನೆಲಾವರಿಕೆಯನ್ನು ಆಯುರ್ವೇದದಲ್ಲಿ ಅಜೀರ್ಣತೆ ಮತ್ತು ಮಲಬದ್ಧತೆಯನ್ನು ನಿವಾರಿಸಲು ಉಪಯೋಗಿಸಲಾಗುತ್ತದೆ. ಆವರಿಕೆಯನ್ನು ಕೂಡಾ ಮಲಬದ್ಧತೆಯನ್ನು ನಿವಾರಿಸಲು ಉಪಯೋಗಿಸಲಾಗುತ್ತದೆ. ತಾಂಜೇನಿಯಾದ ಪೂರ್ವಭಾಗದಲ್ಲಿ ಈ ಗಿಡಗಳನ್ನು ಔಷದೋಪಚಾರಕ್ಕಾಗಿ ಉಪಯೋಗಿಸಲಾಗುತ್ತಿದೆ. ಜರೀ ಸಸ್ಯಗಳು ಮತ್ತು ಲೋಳೆಸರವು ಋತು ಚಕ್ರವಾಗಲು ಪ್ರೇರೇಪಿಸುತ್ತದೆ ಎಂಬ ವೈಜ್ಞಾನಿಕ ವಿವರಗಳು Saha, J.C.; Savini, E.C.; Kasinathan, S. (1961): ಇವರು Ecbolic Properties Of Indian Medicinal Plants ಎಂಬ ವಿಷಯದ ಮೇಲೆ ನಡೆಸಿದ ಅಧ್ಯಯನದಲ್ಲಿ ತಿಳಿದುಬಂದಿದೆ. ಇದು Indian Journal of Medical Research, Volume 49: Pages 130-151 ಎಂಬ ಪತ್ರಿಕೆಯಲ್ಲಿ ದಾಖಲಾಗಿದೆ.)

ಮೂಲ : ಹನಿ ಬೀ, Vol 19(3) ಜುಲೈ - ಸೆಪ್ಟೆಂಬರ್ 2008

ಜಂತುಹುಳುಗಳ ನಿವಾರಣೆ

ಸಾಮಾನ್ಯವಾಗಿ ಕರುಗಳು ಜಂತುಹುಳುಗಳ ಬಾಧೆಗೆ ಒಳಗಾಗುತ್ತವೆ. ಇಂತಹ ಬಾಧೆಗೆ ಒಳಪಟ್ಟ ಪಶುಗಳು ನಿರಾಸಕ್ತ ಹಾಗೂ ನಿಶಕ್ತವಾಗಿ ಕಾಣಿಸುತ್ತವೆ. ದೇಹದ ಮೇಲಿನ ಕೂದಲು ಒರಟಾಗಿ, ಕಣ್ಣುಗಳು ಬಿಳಿಯದಾಗಿ ಕಾಣಿಸುತ್ತವೆ ಮತ್ತು ದೇಹದ ಬೆಳವಣಿಗೆ ಕುಂಠಿತಗೊಳ್ಳುತ್ತವೆ. ಇದಕ್ಕೆ ಪರಿಹಾರವಾಗಿ ಗುಜರಾತಿನ, ವಡೋದರ ಜಿಲ್ಲೆಯ, ಸಾವ್ಲಿ ತಾಲೂಕಿನ, ನವಿನಗಿ ಊರಿನವರಾದ ಕಿರಣ್‌ಭಾಯಿ ಮಂಗಲಭಾಯಿ ಗೋಹಿಲ್‌ರವರು ಕರಿಮೆಣಸನ್ನು ಪುಡಿಮಾಡಿ 250ಗ್ರಾಂ ಹರಳೆಣ್ಣೆಯಲ್ಲಿ ಕುದಿಸುತ್ತಾರೆ. ತಣ್ಣಗಾದ ಈ ದ್ರಾವಣವನ್ನು ಜಂತುಹುಳುಗಳ ಬಾಧೆಗೆ ಒಳಗಾದ ಪಶುಗಳಿಗೆ ಉಪಯೋಗಿಸಿದರೆ ಹುಳಗಳು ಸತ್ತು ಮಲದ ಮೂಲಕ ಹೊರಹಾಕಲ್ಪಡುತ್ತದೆ. ಹೀಗೆ ಈ ಮಿಶ್ರಣವನ್ನು ದಿನಕ್ಕೆ ಒಂದು ಸಾರಿಯಂತೆ ಎರಡು ದಿನಗಳು ಕೊಟ್ಟಲ್ಲಿ ಒಳ್ಳೆಯ ಫಲಿತಾಂಶವು ಕಂಡುಬರುವುದಲ್ಲದೇ, ಕರುಗಳಿಗೆ ಪರಿಣಾಮಕಾರಿಯಾದ ಚಿಕಿತ್ಸೆಯೂ ಕೂಡಾ ಆಗುತ್ತದೆ ಎನ್ನಲಾಗಿದೆ.

ಪ್ರಾಣಿಗಳಲ್ಲಿ ಜಂತುಹುಳುಗಳ ನಿವಾರಣೆಗಾಗಿ ಮತ್ತೊಂದು ಔಷಧಿ ನೀಡಲಾಗುತ್ತದೆ. ಕತ್ತೆ ಕಿರುಬನ ಗಿಡದ *(Aristolochia bracteolata Lam.)* ಎಲೆಗಳು, ನುಗ್ಗೇಕಾಯಿಯ *(Moringa oleifera Lam.)* ಬೀಜಗಳು ಮತ್ತು ಹಾಗಲಕಾಯಿಯ *(Lagenaria siceraria(Molina) Standl.)* ಬೀಜಗಳನ್ನು ಅರೆದು ಉಂಡೆಮಾಡಿ ಬೆಳಗಿನ ಖಾಲಿ ಹೊಟ್ಟೆಯಲ್ಲಿ ಕೊಡಬೇಕು. ನಂತರ ಒಣ ಶುಂಠಿಯನ್ನು ಸೇರಿಸಿ ಮಾಡಿದ ರಾಗಿ ಗಂಜಿಯನ್ನು ಹಾಗು ಕರಿಮೆಣಸು ಮತ್ತು ಹಿಪ್ಪಲಿಯನ್ನು ಹರಳೆಣ್ಣೆಯಲ್ಲಿ ಸೇರಿಸಿ ಕೊಟ್ಟರೆ ಇದು ಜಂತುಹುಳುಗಳನ್ನು ನಿವಾರಿಸುತ್ತದೆ ಎಂದು ಹನಿ ಬೀಯ ಹಳೆಯ ಸಂಚಿಕೆಯಿಂದ ತಿಳಿದು ಬಂದಿದೆ.

(ವೈಜ್ಞಾನಿಕ ಹಿನ್ನೆಲೆ :- ಕರಿಮೆಣಸು ಜಂತುಹುಳುನಾಶಕ, ವಾತಹರ ಮತ್ತು ಜೀವಾಣುನಾಶಕಗಳಂತಹ ಗುಣಗಳಿಂದ ಪರಿಚಿತವಾಗಿದೆ. ಇದನ್ನು ಉದರಶೂಲೆ, ಜಂತುಹುಳು, ಮೂಲವ್ಯಾಧಿ ಮತ್ತು ಉದರ ಕಾಯಿಲೆಗಳ ನಿವಾರಣೆಗೆ ಉಪಯೋಗಿಸಲಾಗುತ್ತದೆ ಎಂದು Black Pepper: Piper Nigrum By P.N. Ravindran, CRC Press - 2004 ಎಂಬ ಪತ್ರಿಕೆಯಲ್ಲಿ ಈಗಾಗಲೇ ತಿಳಿಸಲಾಗಿದೆ.)

ಮೂಲ : ಹನಿ ಬೀ, Vol 19(1) ಜನವರಿ - ಮಾರ್ಚ 2008

"ಜೀರಕ" ಒಂದು ಪರ್ಯಾಯ ಹುಳಿ

ಜೀರಕ ಅಥವಾ ಜಾರಿಗೆ *(Garcinia spicata,)*ಯು ಕರ್ನಾಟಕದ ಉತ್ತರ ತುದಿ ಸವದತ್ತಿಯಿಂದ ದಕ್ಷಿಣದ ಕೊಡಗುವರೆಗೆ ಚಾಚಿದ ಪಶ್ಚಿಮ ಘಟ್ಟನಾಡಿನ ಸದಾ ಹಸಿರು ಮರ. ಅಡುಗೆಯಲ್ಲಿ ಬಳಕೆಯಾಗುವ ಹುಣಸೆ, ಟೊಮೆಟೊ ಮತ್ತು ನಿಂಬೆಯನ್ನು ಸರಿಗಟ್ಟುವ ಹುಳಿಯು ಜಾರಿಗೆ ಮರದಲ್ಲಿ ಬಿಡುವ ಹಣ್ಣುಗಳಲ್ಲಿವೆ. ಮಲೆನಾಡಿನಲ್ಲಿ ಜೀರಕಲು ಹಣ್ಣು ಎಂದೇ ಇದು ಪರಿಚಿತ ವಾಗಿದೆ. ಮುಷ್ಟಿ ಗಾತ್ರದ ಹಣ್ಣುಗಳು ಬಂಗಾರದ ಬಣ್ಣವನ್ನು ಹೊಂದಿವೆ. ದಪ್ಪ ಸಿಪ್ಪೆಯೊಳಗೆ ಹುರುಳಿಯಾಕಾರದ ಎರಡು ಬೀಜಗಳಿದ್ದು, ಅತಿಹೆಚ್ಚು ಜಿಡ್ಡಿನಂಶದಿಂದ ಕೂಡಿದೆ. ರಸಭರಿತವಾದ ತಿರುಳು ಕೂಡಾ ಬಂಗಾರ ಬಣ್ಣವನ್ನು ಹೊಂದಿದೆ. ಜೀರಕಲು ಹಣ್ಣು ನವೆಂಬರ್‌ನಿಂದ ಜನವರಿ ತಿಂಗಳಲ್ಲಿ ಕೊಯ್ಯಲು ಸಿಗುತ್ತದೆ. ಬಲಿತ ಕಾಯಿಯನ್ನು ಕತ್ತರಿಸಿ ನೀರಿನಲ್ಲಿ 1 -2 ದಿನ ನೆನಸಿ, ನಂತರ ಬಿಸಿಲಿನಲ್ಲಿ ಒಣಗಿಸಿ ಸಂಗ್ರಹಿಸಿ ಇಟ್ಟರೆ 1 -2 ವರ್ಷ ಹಾಳಾಗದೇ ಉಪಯೋಗಕ್ಕೆ ಸಿಗುತ್ತದೆ. ಮಾಂಸದ ಅಡುಗೆಗೆ ಬಲು ರುಚಿ ಮತ್ತು ಅಗತ್ಯ ಎಂದೇ ಪರಿಗಣಿಸುತ್ತಾರೆ ಮಲೆನಾಡಿನ ಜನತೆ. ಹಳದಿ ಬಣ್ಣದ ಹಣ್ಣು ಸಿಹಿಯಾಗಿದ್ದು ಗೊಜ್ಜು ಅಥವಾ 'ಸಾಸಿವೆ' ಎನ್ನುವ ಅಡುಗೆಗೆ ರುಚಿಯಾಗಿರುತ್ತದೆ. 6-7 ವರ್ಷ ದೀರ್ಘ ಆಯಸ್ಸುಳ್ಳ ಈ ಮರಕ್ಕೆ ಕಾಯಿಲೆಯೇ ಇಲ್ಲ ಎನ್ನಬಹುದು. ಜೊತೆಗೆ ಬಲಿತ ಕಾಂಡದಿಂದ ಎಸ್ ಆಕಾರದ ಗೀರು ಹಾಕಿ ಅಂಟು ತೆಗೆಯುವರು. ಇದು ಮರ, ಲೋಹದ ಮೇಲ್ಮೈಗೆ ಅರಸಿನ ಬಣ್ಣ ನೀಡಲು ಬಳಕೆಯಾಗುತ್ತದೆ. ಚೀನಾ ದೇಶದಲ್ಲಿ ಸಹ ದುಬಾರಿ ಬಟ್ಟೆಗಳಿಗೆ, ಚಿನ್ನದ ಪೀತಾಂಬರಕ್ಕೆ ಬಣ್ಣ ಕೊಡಲು ಇದರ ಅಂಟನ್ನು ಬಳಸಲಾಗುತ್ತದೆ. ಅಲ್ಲದೆ ಒರಲೆ ಹಾಗು ಗೆದ್ದಲು ವಿರೋಧಿಯಾಗಿರುವ ಮರದ ಎಲೆಗಳನ್ನು ಹಿಂದೆ ಜಂತಿ ತೊಲೆಗಳ ಮೇಲೆ ದಪ್ಪ ಹಂದರ ಹಾಕಿ ಅದರ ಮೇಲೆದಪ್ಪನೆ ಮಣ್ಣಿನ ಪದರವನ್ನು ಸಾರಿಸುತ್ತಿದ್ದರು. ಅಂತಹ ಭದ್ರ ತಾರಸಿ ಮನೆಗೆ ಜಾರಿಗೆ ಎಲೆ ಬೇಕಿತ್ತು. ಇದರ ದಪ್ಪ ಎಲೆ ಕೊಳೆಯದು, ನಿರಿಗೆಗಟ್ಟದು. ಹಿಂದೆ ಬಿಸಿಲು, ಮಳೆ ರಕ್ಷಣೆಗೆ ಎಲೆಯ ಹಂದರದ ಗೊರಬು ತಯಾರಿಕೆಗೆ ಸಹ ಜಾರಿಗೆ ಎಲೆ ಉಪಯೋಗವಾಗುತ್ತಿತ್ತು.

ಜಾರಿಗೆಯ ಔಷಧೀಯ ಗುಣಗಳು : ಜಾರಿಗೆ ಹಣ್ಣು ಸಿಹಿ, ಹುಳಿ. ಅತಿ ತಿಂದರೆ ಪಿತ್ತ, ಭೇದಿ. ಆದರೆ ಮಲಬದ್ಧತೆ ರೋಗಿಗೆ ರಾಮಬಾಣ. ಮರದಂಟು ತೀವ್ರ ಭೇದಿಕಾರಕ, ಮಧುಮೇಹ ರೋಗಿಗೆ ಹಿತ. ಮಕ್ಕಳ ಮತ್ತು ಹಿರಿಯರ ಜಂತು ತೊಂದರೆಗೆ ಇದು ಪರಿಹಾರ. ಹಣ್ಣಿನ ಶರಬತ್ ಕುಡಿದರೆ ಪಿತ್ತದ ತಲೆ ತಿರುಗು ಉಪಶಮನ. ಇದರಿಂದ ಏರಿದ ರಕ್ತದೊತ್ತಡ ಇಳಿಸಲು ಸಾಧ್ಯ. ಬೊಜ್ಜು ನಿರೋಧಕ ಮತ್ತು ನಿವಾರಣೆಗೆ ಸಹ ಇದು ಉಪಕಾರಿ. ತಾಜಾ ಹಣ್ಣಿನ ಸತ್ವ ಶೇಖರಿಸಿ ಕಾಪಾಡಿದರೆ ಅಡುಗೆ ಹುಳಿ ಸಿದ್ಧ. ಬೀಜದ ಎಣ್ಣೆ ಖಾದ್ಯತೈಲ, ಇಂಧನ ಮೂಲ ಕೂಡಾ. ಕಾಂಡದ ಅಂಟು ಬಣ್ಣ ವಾರ್ನಿಶ್‌ಗೆ ಬಳಕೆ. ಜಾರಿಗೆ ಕಾಯಿಯಿಂದ ಉತ್ತಮ ಉಪ್ಪಿನ ಕಾಯಿ ತಯಾರಿಸಲು ಸಾಧ್ಯ. ಇದು ಶೀಘ್ರವಾಗಿ ಬೆಳೆಯುವ ಮರ. ಎಂತಹ ಮಣ್ಣಿಗೂ ಹೊಂದಿಕೊಳ್ಳುತ್ತದೆ. ಇದು ಹೆಚ್ಚು ನೀರು ಬೇಡುವ ಮರ. ಹಣ್ಣಿನೊಳಗಿನ ದೊಡ್ಡಬೀಜವನ್ನು ಆರಿಸಿ ಸಸಿಗಳನ್ನು ತಯಾರಿಸಬಹುದು. ಕಸಿ ಮೂಲಕವೂ ಅಭಿವೃದ್ಧಿ ಪಡಿಸಬಹುದು.

ಮೂಲ: ವಿಜಯ ಕರ್ನಾಟಕ, 19 ನವೆಂಬರ್ 2008.

ನಾಟಿ ರಾಗಿ ತಳಿಗಳ ಸಂರಕ್ಷಣೆ ಮತ್ತು ಆಹಾರ

ರಾಗಿ ಪ್ರಾಚೀನ ಬೇಸಾಯದ ಇತಿಹಾಸವನ್ನು ಹೊಂದಿದೆ ಮತ್ತು ಕರ್ನಾಟಕದಲ್ಲಿ ಕ್ರಿ.ಪೂ.1800 ರಿಂದಲೇ ಇದರ ಉಳುಮೆಯನ್ನು ಮಾಡಲಾಗುತ್ತಿದೆ. ರಾಗಿಯ ಬಗ್ಗೆ ಪ್ರೇರೇಪಿತವಾಗಿರುವ ಮಂಡ್ಯ ಜಿಲ್ಲೆಯ ಶಿವಹಳ್ಳಿಯ ರೈತರಾದ ಸೋಮಶೇಖರ್‌ರವರು ಹಲವು ನಾಟೀ ತಳಿಗಳಾದ ಹಸಿರು ರಾಗಿ, ದೊಡ್ಡ ರಾಗಿ, ಜೇನು ಮುತ್ತಿಗೆ ರಾಗಿ, ಉಂಡೆ ರಾಗಿ, ಕೋಣಕೊಂಬಿನರಾಗಿ ಇನ್ನು ಮುಂತಾದ ಒಟ್ಟಾರೆ 30 ತಳಿಗಳನ್ನು ಸಂಗ್ರಹಣೆ ಮಾಡಿದ್ದಾರೆ.ಈ ತಳಿಗಳನ್ನು ಮೊದಲು ನರ್ಸರಿಗಳಲ್ಲಿ ಬೆಳೆಸಿ ನಂತರ ಅವರ ಎರಡು ಎಕರೆಯ ಭೂಮಿಯಲ್ಲಿ ನಾಟಿ ಮಾಡಲಾಗಿದೆ. ಪ್ರತಿ ತಳಿಯನ್ನು ನೇರ ಸಾಲುಗಳಲ್ಲಿ ನಾಟಿ ಮಾಡಲಾಗಿದ್ದು ಯಾವ ರಾಸಾಯನಿಕಗಳನ್ನು ಬಳಸದ ಬೆಳೆಗಳು ಹುಲುಸಾಗಿ ಬೆಳೆದಿರುತ್ತವೆ. ಇವರ ಸಂಗ್ರಹಣೆಯಲ್ಲಿರುವ ಪ್ರತಿಯೊಂದು ತಳಿಗೂ ತನ್ನದೇ ಆದ ವೈಶಿಷ್ಟ್ಯವಿದೆ. ಇವರು ಆ ಪ್ರದೇಶದಲ್ಲಿ ಅಳಿವಿನಂಚಿನಲ್ಲಿದ್ದ ಅಯ್ಯನ ರಾಗಿಯನ್ನು ಪುನಃ ಬೆಳೆಯುವಂತೆ ಮಾಡಿದ್ದಾರೆ. ಕೊಳ್ಳೇಗಾಲ ಕಾಡಿನ ಹಳ್ಳಿಗಳಲ್ಲಿ ಬೆಳೆಯಲಾಗುವ ದೊಡ್ಡ ರಾಗಿಯನ್ನು ಹೊಲಗಳ ಅಂಚುಗಳಲ್ಲಿ ಹಾಕಿದ್ದಾರೆ. ಈ ದೊಡ್ಡರಾಗಿ ತಳಿಯ ಹುಲ್ಲಿನ ಕಹಿ ರುಚಿಯಿಂದಾಗಿ ಯಾವ ಪ್ರಾಣಿಗಳು ಬೆಳೆಗಳಿಗೆ ಬಾಯಿ ಹಾಕಲಾರವು. ಮಜ್ಜಿಗೆ ರಾಗಿ ತಳಿಯಿಂದ ಮಾಡಿದ ಮುದ್ದೆಗಳನ್ನು ಮಜ್ಜಿಗೆಯೊಂದಿಗೆ ಬಳಸಿದರೆ ದೇಹದ ಉಷ್ಣತೆಯನ್ನು ಕಾಪಾಡುತ್ತದೆ. ಈ ಮಜ್ಜಿಗೆ ರಾಗಿ ತಳಿಯಿಂದ ರುಚಿಕರವಾದಂತಹ ಇಡ್ಲಿ ಮತ್ತು ದೋಸೆಗಳನ್ನು ಸಹ ಮಾಡಬಹುದು. ಉದ್ದನೆಯ ತೆನೆಯುಳ್ಳ ಕೋಣಕೊಂಬಿನ ರಾಗಿ ತಳಿಯನ್ನು ಚಿತ್ರದುರ್ಗ ಮತ್ತು ತುಮಕೂರು ಜಿಲ್ಲೆಗಳಲ್ಲಿ ಬೆಳೆಯಲಾಗುತ್ತಿದೆ. ಇದರಿಂದ ರೊಟ್ಟಿಗಳನ್ನು ಮಾಡುತ್ತಾರೆ. ಕೆನೆಬಣ್ಣದ, ಆಕರ್ಷಕವಾಗಿ ಕಾಣಿಸುವಂತಹ ತೆನೆಗಳನ್ನು ಹೊಂದಿರುವ, ಬೇಸಿಗೆಯ ಬೆಳೆಯಾದ ಬಿಳಿ ರಾಗಿಯು ನೀರಾವರಿಗೆ ಹೊಂದಿಕೊಳ್ಳುತ್ತದೆ. ಕೆಂಪು ತೆನೆ ರಾಗಿ ತಳಿಯಲ್ಲಿ ಹೂ ಬಿಟ್ಟ ಸಮಯದಲ್ಲಿ ತೆನೆಗಳು ಕಂದು ಮಿಶ್ರಿತ ಕೆಂಪು ಬಣ್ಣವನ್ನು ಹೊಂದಿರುತ್ತದೆ.ಕರಿರಾಗಿ, ಉಂಡೆರಾಗಿ, ನಾಟಿರಾಗಿ, ಗುಟ್ಟೆರಾಗಿ, ಜೇನು-ಬುಂಡುಗ, ಗುಟ್ಟೆಕೆಳಗಿನರಾಗಿ, ಸಣ್ಣಕಡ್ಡಿರಾಗಿ, ಪಿಚ್ಚಕಡ್ಡಿರಾಗಿ, ಯಡಗರಾಗಿ, ಕೋಳಿಮೊಟ್ಟೆರಾಗಿ, ಜೇನು ಮುಡಿರಾಗಿ, ಪಟ್ಟಣರಾಗಿ, ಕರಿಬುಂಡುಗರಾಗಿ ಇನ್ನು ಹಲವಾರು ತಳಿಗಳು ಇವರ ಸಂಗ್ರಹಣೆಯಲ್ಲಿವೆ.ಹಸಿರು ಬುಂಡುಗ ರಾಗಿಯು ಹೆಚ್ಚಿನ ರೈತರ ಆಯ್ಕೆಯಾಗಿದೆ. ಹಸಿರು ಬುಂಡುಗರಾಗಿಯು ಏಕರೂಪದ ಪರಿಪಕ್ವತೆ, ತೆರೆದ ಉದ್ದನೆಯ ತೆನೆಗಳನ್ನು ಹೊಂದಿದೆ. ಈ ತಳಿಯು ಕೀಟ ಮತ್ತು ಕುತ್ತಿಗೆ ಬೆಂಕಿ ರೋಗಗಳ ನಿರೋಧಶಕ್ತಿಯನ್ನು ಹೊಂದಿದೆ. ಅಲ್ಲದೇ ಉತ್ತಮ ಗುಣಮಟ್ಟದ ಮೇವು ಹಾಗೂ ಹೆಚ್ಚಿನ ಇಳುವರಿಯನ್ನು ಕೊಡುತ್ತದೆ. ಇದೇ ರೀತಿ ದೊಡ್ಡರಾಗಿ, ಕೋಣಕೊಂಬಿನರಾಗಿ ಮತ್ತು ಪಿಚ್ಚಕಡ್ಡಿರಾಗಿ ತಳಿಗಳು ಸಹ ಕೀಟ ಹಾಗೂ ರೋಗ ನಿರೋಧಕ ಶಕ್ತಿ ಹೊಂದಿದೆ.ರಾಗಿಯಲ್ಲಿ ವಿರಳವಾಗಿ ಕಾಣಿಸಿಕೊಳ್ಳುವ ಮೂರು ಬಗೆಯ ರೋಗಗಳಾದ ಕುತ್ತಿಗೆ ಬೆಂಕಿರೋಗ, ಗಿಣ್ಣುರೋಗ ಮತ್ತು ಇಳುಕು ರೋಗಗಳಿಗೆ ಸಾವಯವದ ಮೂಲಕವೇ ಹತೋಟಿ ಮಾಡುತ್ತಾರೆ.ಇಂತಹ ರೈತರನ್ನು ಒಳಗೊಂಡಿರುವ "ಕಾಮಧೇನು ನೈಸರ್ಗಿಕ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಸಂಸ್ಥೆ"ಯು 2003ರಲ್ಲಿ ಪ್ರಾರಂಭ ವಾಗಿದ್ದು ಇದು ರಾಗಿಯ ಪೌಷ್ಟಿಕ ಅಂಶಗಳ ಬಗ್ಗೆ ಕುರಿತು ಜನರಿಗೆ ಮಾಹಿತಿ ಒದಗಿಸುತ್ತಿದೆ. ಬೆಳೆಯು ಕಾಳು ಬಿಡುವ ಸಮಯದಲ್ಲಿ ಕಾಮಧೇನು ಸಂಸ್ಥೆಯು ಕೃಷಿ ದಿನವನ್ನು ಏರ್ಪಡಿಸುತ್ತದೆ. ಇಲ್ಲಿ ರೈತರುಗಳು ತಮ್ಮ ಅನುಭವಗಳನ್ನು ಮತ್ತು ಕಾರ್ಯಪರಿಹಾರಗಳನ್ನು ಒಬ್ಬರಿಂದೊಬ್ಬರಿಗೆ ಹಂಚಿಕೊಳ್ಳಲೆಂದು ಅಕ್ಕ-ಪಕ್ಕದ ಹಳ್ಳಿಗಳಿಂದ ರೈತರುಗಳನ್ನು ಆಹ್ವಾನಿಸುತ್ತಾರೆ. ಅವರವರ ಅಗತ್ಯಕ್ಕೆ ತಕ್ಕಂತೆ ರೈತರು ರಾಗಿ ತಳಿಯನ್ನು ಆರಿಸಿಕೊಳ್ಳುತ್ತಾರೆ.

ಹೆಚ್ಚಿನ ಮಾಹಿತಿಗೆ ಕಾಮಧೇನು ಸಂಸ್ಥೆಯ ಮುಖ್ಯಸ್ಥರಾದ ಎಸ್.ಬೋರೇಗೌಡರನ್ನು (ಫೋ-998638116) ಸಂಪರ್ಕಿಸಬಹುದು.

ಮೂಲ: ಡೆಕ್ಕನ್ ಹೆರಾಲ್ಡ್, ಜೂನ್ 17 , 2008.

ಕೃಷಿ ಸಂಪಾದಕರ ಪರಿಷತ್ ಅಸ್ತಿತ್ವಕ್ಕೆ

ರಾಜ್ಯದಲ್ಲಿ ಕೃಷಿ ಗ್ರಾಮೀಣ ಪತ್ರಿಕೆಗಳ ಅಭಿವೃದ್ಧಿಯ ಉದ್ದೇಶದಿಂದ **" ಕೃಷಿ ಸಂಪಾದಕರ ಪರಿಷತ್"** ಅಸ್ತಿತ್ವಕ್ಕೆ ಬಂದಿದೆ. ಬೆಂಗಳೂರಿನಲ್ಲಿ ಫೆಬ್ರವರಿ 20 ರಂದು ಏರ್ಪಡಿಸಲಾಗಿದ್ದ 'ಕೃಷಿ ಪತ್ರಿಕೋದ್ಯಮ ಮತ್ತು ಸವಾಲುಗಳು'ಎಂಬ ವಿಷಯದ ಕುರಿತ ಕಾರ್ಯಾಗಾರದಲ್ಲಿ ಇದೇ ಮೊದಲ ಬಾರಿಗೆ ಕೃಷಿ-ಗ್ರಾಮೀಣ ಪತ್ರಿಕೆಗಳ ಸಂಪಾದಕರು ಹಾಗೂ ಈ ವಲಯದ ಗಣ್ಯರ ಸಮಾಲೋಚನೆ ನೆಡೆಸಿ ಈ ಪತ್ರಿಕೆಗಳು ಎದುರಿಸುತ್ತಿರುವ ಅನೇಕ ಸಮಸ್ಯೆಗಳ ಬಗ್ಗೆ ಚರ್ಚಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ ಅಸ್ತಿತ್ವಕ್ಕೆ ಬಂದಿರುವ ಪರಿಷತ್ ಈ ಕೆಳಗಿನ ಹಕ್ಕೊತ್ತಾಯಗಳನ್ನು ಮುಂದಿಟ್ಟಿರುತ್ತದೆ.

1. ಸರಕಾರದ ವಿವಿಧ ಇಲಾಖೆಗಳು (ಕೃಷಿ, ತೋಟಗಾರಿಕೆ, ಪಶು ಸಂಗೋಪನೆ, ರೇಷ್ಮೆ , ಅರಣ್ಯ, ಶಿಕ್ಷಣ, ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್‌ರಾಜ್, ಗ್ರಂಥಾಲಯ ಇಲಾಖೆ ಇತ್ಯಾದಿ)ತಮ್ಮ ಅಧೀನದಲ್ಲಿರುವ ವಿವಿಧ ಕಛೇರಿಗಳಿಗೆ ಕೃಷಿ ,ಗ್ರಾಮೀಣ ಪತ್ರಿಕೆಗಳನ್ನು ತರಿಸಲು ಕೇಂದ್ರೀಕೃತ ಚಂದಾ ನೀಡುವ ವ್ಯವಸ್ಥೆ ಜಾರಿಗೊಳಿಸಬೇಕು. ಎಲ್ಲಾ ಗ್ರಂಥಾಲಯಗಳು ಹಾಗೂ ಶಾಲಾ ಕಾಲೇಜುಗಳಿಗೂ ಕೃಷಿ ಗ್ರಾಮೀಣ ಪತ್ರಿಕೆಗಳನ್ನು ತರಿಸಿಕೊಳ್ಳುವ ವ್ಯವಸ್ಥೆ ಆಗಬೇಕು. ಈ ಉದ್ದೇಶಕ್ಕಾಗಿ ವಾರ್ತಾ ಇಲಾಖೆ ಅರ್ಹ ಕೃಷಿ ಗ್ರಾಮೀಣ ಪತ್ರಿಕೆಗಳ ಪಟ್ಟಿಯನ್ನು ಒದಗಿಸುವುದು ಸೂಕ್ತ.

2. ಸರಕಾರದಿಂದ ಕೃಷಿ ಗ್ರಾಮೀಣ ಪತ್ರಿಕೆಗಳಿಗೆ ಜಾಹೀರಾತು ದೊರಕುವಂತಾಗಬೇಕು.

3. ಕೃಷಿ ವಿಶ್ವವಿದ್ಯಾಲಯಗಳು ಸೇರಿದಂತೆ ಸರಕಾರಿ ವಲಯದ ವಿವಿಧ ಕೃಷಿಮೇಳಗಳಲ್ಲಿ ಕೃಷಿ ಪತ್ರಿಕೆಗಳಿಗೆ ಉಚಿತವಾಗಿ ಅಥವಾ ರಿಯಾಯಿತಿ ದರದಲ್ಲಿ ಮಳಿಗೆಗಳು ಲಭ್ಯವಾಗಬೇಕು.

4. ಸರಕಾರದ ವತಿಯಿಂದ ಕೃಷಿ, ಗ್ರಾಮೀಣ ರಂಗಕ್ಕಾಗಿ ಜಾರಿಗೊಳ್ಳುವ ವಿವಿಧ ಕಾರ್ಯಕ್ರಮಗಳ ಬಗ್ಗೆ ಕೃಷಿ ಪತ್ರಿಕೆಗಳಿಗೆ ಸೂಕ್ತ ಮಾಹಿತಿ ಒದಗಿಸಬೇಕು.

5. ಆಯ್ದ ಕೃಷಿ ಪುಸ್ತಕಗಳನ್ನು ಕೃಷಿ ಹಾಗೂ ಸಂಬಂಧಿ ಇಲಾಖೆಗಳು ಸಗಟು ರೂಪದಲ್ಲಿ ಖರೀದಿಸಿ ತಮ್ಮ ಅಧೀನದಲ್ಲಿರುವ ಕಛೇರಿಗಳಿಗೆ ವಿತರಿಸಬೇಕು.

6. ಸರಕಾರ ಮತ್ತು ಕೃಷಿ ಪತ್ರಿಕೆಗಳ ನಡುವೆ ಕೊಂಡಿಯಾಗುವಂತಹ ಪ್ರತ್ಯೇಕ ವ್ಯವಸ್ಥೆ ರೂಪಿಸಬೇಕು.

7. ಕೇರಳದ 'ಫಾರ್ಮ ಇನ್‌ಫಾರ್ಮೇಶನ್ ಬ್ಯೂರೋ'ದ ರೀತಿಯಲ್ಲಿ ಕಾಲದಿಂದ ಕಾಲಕ್ಕೆ ಹೊಸಹೊಸ ಕೃಷಿ ತಂತ್ರಜ್ಞಾನ, ಬೆಳೆಗಳು ಇತ್ಯಾದಿಗಳ ಬಗ್ಗೆ ಸವಿವರ ಪುಸ್ತಕಗಳನ್ನು ಪ್ರಕಟಿಸಬೇಕು. ಕೃಷಿ ಪತ್ರಿಕೆಗಳಿಗೂ ಒದಗಿಸಬೇಕು.

8. ಸಾವಯವ, ಸುಸ್ಥಿರ ಕೃಷಿಯಲ್ಲಿ ಮಾದರಿಯಾಗಿರುವ ರೈತರ ತೋಟಗಳಿಗೆ ಜಿಲ್ಲಾ ಮತ್ತು ರಾಜ್ಯಮಟ್ಟದಲ್ಲಿ ಕೃಷಿ ಪತ್ರಿಕೆಗಳ ಪ್ರತಿನಿಧಿಗಳು ಹಾಗೂ ಬರಹಗಾರರನ್ನು ಕರೆದೊಯ್ದು ಆ ಕೃಷಿಕರ ಸಾಧನೆಗಳಿಗೆ ಮಾಧ್ಯಮ ಬೆಳಕು ಬೀಳುವಂತೆ ಮಾಡಬೇಕು.

9. ರಾಜ್ಯ ಸರಕಾರ ಕೃಷಿ ಪಂಡಿತ ದಂತಹ ಪ್ರಶಸ್ತಿ ಕೊಡುವಾಗ ಇವರ ಬಗ್ಗೆ ವಿವರ , ಸಾಧನೆ ಇತ್ಯಾದಿಗಳ ಬಗ್ಗೆ ತಿಳಿಸುವ ಒಂದು ಹೊತ್ತಿಗೆ ಮತ್ತು ಇವರ ಕೃಷಿ ಚಟುವಟಿಕೆಗಳಿಗೆ ಸಂಬಂಧಿಸಿದ ಒಂದಷ್ಟು ಫೋಟೋ ಒದಗಿಸುವುದರ ಜೊತೆಗೆ ಇವರ ತೋಟಗಳಿಗೆ ಕೃಷಿ ಪತ್ರಿಕಾ ತಂಡಗಳ ಅಧ್ಯಯನ ಪ್ರವಾಸ ಕರೆದೊಯ್ದು ಅವರ ಸಾಧನೆ ಇಡೀ ರಾಜ್ಯಕ್ಕೇ ತಿಳಿಯುವಂತೆ ಮಾಡಲು ಸಹಕರಿಸಬೇಕು.

10. ಹೊರ ರಾಜ್ಯಗಳಲ್ಲಿನ ಕೃಷಿ ಕಾರ್ಯಚಟುವಟಿಕೆಗಳನ್ನು ವೀಕ್ಷಿಸಲು ಆಸಕ್ತ ಕೃಷಿ ಪತ್ರಕರ್ತರು ಹಾಗೂ ಅಭಿವೃದ್ಧಿ ಬರಹಗಾರರನ್ನು ಪ್ರವಾಸ ಕರೆದೊಯ್ಯಬೇಕು. ಈ ಮೂಲಕ ಅಲ್ಲಿ ರೈತರು ನಡೆಸಿರುವ ಹೊಸ ಸಂಶೋಧನೆಗಳು, ಮಾರುಕಟ್ಟೆ ವ್ಯವಸ್ಥೆ, ತಂತ್ರಜ್ಞಾನ, ದೇಸಿ ಜ್ಞಾನ ಇತ್ಯಾದಿಗಳ ಪರಿಚಯವಾಗುವಂತೆ ಮಾಡಬೇಕು.

11. ಸರಕಾರ ಕೃಷಿ ಮಾಧ್ಯಮ ಫೆಲೋಷಿಪ್‌ಗಳನ್ನು ಪ್ರಕಟಿಸಬೇಕು. ಈ ಮೂಲಕ ಕರ್ನಾಟಕದಲ್ಲಿ ನಡೆಯುತ್ತಿರುವ ರೈತಪರ ಸಂಶೋಧನೆಗಳನ್ನು ದಾಖಲಿಸಲು ಅಭಿವೃದ್ಧಿ ಬರಹಗಾರರಿಗೆ ಆರ್ಥಿಕ ನೆರವು ನೀಡಬೇಕು. ಈ ಉದ್ದೇಶಕ್ಕಾಗಿ ಕರ್ನಾಟಕ ಮಾಧ್ಯಮ ಅಕಾಡೆಮಿಯಲ್ಲಿ ಪ್ರತ್ಯೇಕ ನಿಧಿ ಸ್ಥಾಪಿಸಬಹುದು.

ರಾಜ್ಯದಲ್ಲಿ ಕೃಷಿ ರಂಗದ ಮುನ್ನಡೆಯಲ್ಲಿ ಕೃಷಿ ಗ್ರಾಮೀಣ ಪತ್ರಿಕೆಗಳ ಪಾತ್ರ ಮಹತ್ವದ್ದಾಗಿದ್ದು ರೈತರಿಗೆ ಅಗತ್ಯಾಧಾರಿತ ಮಾಹಿತಿ ಕೊಡುವಲ್ಲಿ ಇವು ಸಕ್ರಿಯ ದುಡಿಯುತ್ತಿವೆ. ಸಾವಯವ ಕೃಷಿ, ನೆಲ-ಜಲ ಸಂರಕ್ಷಣೆ, ಅರಣ್ಯೀಕರಣ, ಶ್ರಮ ಉಳಿಸುವ ತಂತ್ರಜ್ಞಾನ, ರೈತರ ಅನುಶೋಧನೆ, ಮೌಲ್ಯವರ್ಧಿತ ಉತ್ಪನ್ನಗಳ ತಯಾರಿ, ಮಾರುಕಟ್ಟೆ ಅವಕಾಶಗಳು ಇವೇ ಮುಂತಾದ ವಿಷಯಗಳ ಮೇಲೆ ಈ ಪತ್ರಿಕೆಗಳು ಬೆಳಕುಚೆಲ್ಲುತ್ತಿವೆ. ಈ ಹಿನ್ನಲೆಯಲ್ಲಿ ಇವುಗಳ ಬಲವರ್ಧನೆ ಅಗತ್ಯವಾಗಿದ್ದು ಸರಕಾರ ಸೂಕ್ತ ಬೆಂಬಲ ನೀಡಬೇಕು ಎಂದು ಕಾರ್ಯಾಗಾರ ಒತ್ತಾಯಿಸಿತು.ಬೆಂಗಳೂರಿನ ಕೃಷಿ ತಂತ್ರಜ್ಞರ ಸಂಸ್ಥೆ ಧಾರವಾಡದ ಕೃಷಿ ಮಾಧ್ಯಮ ಕೇಂದ್ರದ ಸಹಭಾಗಿತ್ವದಲ್ಲಿ ಕಾರ್ಯಾಗಾರ ಹಮ್ಮಿಕೊಂಡಿತ್ತು.

ತಟ್ಟೆಯೊಳಗಿನ ವಿಷ

ಬೆಂಗಳೂರಿನ ಅಲೆಯನ್ಸ್ ಫ್ರಾನ್ಸಿಸ್ ಸಂಸ್ಥೆಯಲ್ಲಿ ಹೆಸರಾಂತ ಚಿತ್ರ ನಿರ್ದೇಶಕ ಶ್ರೀ ಮಹೇಶ್ ಭಟ್ ಸೃಷ್ಟಿಸಿರುವ **"ತಟ್ಟೆಯೊಳಗಿನ ವಿಷ** *('Poison on the Plotter)"* ಸಾಕ್ಷ್ಯ ಚಿತ್ರವನ್ನು ಮಾರ್ಚ 7 ರಂದು ಪ್ರದರ್ಶನಗೊಳಿಸಲಾಯಿತು. ಈ ಸಂದರ್ಭದಲ್ಲಿ **'ಯೋಗ್ಯ ಆಹಾರ ನನ್ನ ಹಕ್ಕು'** ಚಳುವಳಿಯನ್ನೂ ಆರಂಭಿಸಲಾಗಿದೆ.ಚಲನ ಚಿತ್ರ ಪ್ರದರ್ಶನದ ನಂತರ ಮನುಕುಲದ ಆರೋಗ್ಯ ಮತ್ತು ಪರಿಸರದ ಮೇಲೆ ಜೈವಿಕ ಆಹಾರದಿಂದ ಆಗುತ್ತಿರುವ ದುಷ್ಪರಿಣಾಮಗಳ ಬಗ್ಗೆ ಚರ್ಚೆ ಇರಿಸಲಾಗಿತ್ತು. ಇದರಲ್ಲಿ ಖ್ಯಾತ ಲೇಖಕ-ನಿರ್ದೇಶಕ ನಾಗತಿಹಳ್ಳಿ ಚಂದ್ರ ಶೇಖರ್, ಚಿಂತಕ ದೇವಿಂದರ್ ಶರ್ಮ, ನಿರ್ದೇಶಕ ಅಜಯ್ ಕಾಂಚನ್ ಹಾಗೂ ಮಹೇಶ್ ಭಟ್ ಮತ್ತಿತರ ಅನೇಕ ಗಣ್ಯರು ಭಾಗವಹಿಸಿದ್ದರು.ಜನರ ಮುಗ್ಧತೆ, ಅರಿವಿನ ಅಭಾವವನ್ನು ದುರುಪಯೋಗಪಡಿಸಿಕೊಂಡು ಹಲವು ಬಹುರಾಷ್ಟ್ರೀಯ ಕಂಪನಿಗಳು ಜೈವಿಕ ತಂತ್ರಜ್ಞಾನವನ್ನು ಬಳಸಿ ಇಂದು ನಮ್ಮ ಸೂಪರ್ ಮಾರ್ಕೆಟ್‌ಗಳನ್ನು ವಿಷಪೂರಿತ ಆಹಾರೋತ್ಪನ್ನಗಳಿಂದ ತುಂಬಿಸಿವೆ. ಇದನ್ನು ಮಹೇಶ್ ಭಟ್‌ರವರು ಜೈವಿಕ ಭಯೋತ್ಪಾದನೆ ಎಂದು ಕರೆದಿದ್ದಾರೆ. ಇದರ ವಿರುದ್ಧ ನಾವು ಮೂಕ ಪ್ರೇಕ್ಷಕರಾಗಿ ಕೂರಲು ಸಾಧ್ಯವಿಲ್ಲ, ಸ್ವಾತಂತ್ರ್ಯ ಚಳುವಳಿಯಷ್ಟೇ ಪ್ರಖರವಾದ ರಾಷ್ಟ್ರೀಯ ಚಳುವಳಿಯನ್ನು ಮತ್ತೆ ಆರಂಭಿಸಬೇಕಾಗಿದೆ ಎಂದು ಎಚ್ಚರಿಸಿದ್ದಾರೆ. ದೇವಿಂದರ್ ಶರ್ಮ ಹೇಳುವಂತೆ ಜಗತ್ತಿನ ಕಸದ ತೊಟ್ಟಿ ಎಂದು ನಮ್ಮ ಭಾರತವನ್ನು ಪರಿಗಣಿಸಲಾಗಿದೆ. ಬೇಡದ ತಂತ್ರಜ್ಞಾನ ಮತ್ತು ಆತಂಕಕಾರಿಯಾದವುಗಳನ್ನೆಲ್ಲಾ ಇಲ್ಲಿ ತಂದು ಸುರಿಯಲಾಗುತ್ತಿದೆ ಎಂದು ಅಭಿಪ್ರಾಯ ಪಟ್ಟಿದ್ದಾರೆ. ನಾಗತಿಹಳ್ಳಿ ಚಂದ್ರಶೇಖರ್ ಈ ವಿಷಮುಕ್ತ ಆಹಾರ ಸೇವನೆಯಿಂದ ನಮ್ಮ ಈ ತಲೆಮಾರನ್ನಷ್ಟೇ ಅಲ್ಲ ಮುಂದಿನ ತಲೆಮಾರನ್ನು ಮುಕ್ತಗೊಳಿಸಬೇಕಾಗಿದೆ ಎಂದಿದ್ದಾರೆ. ಅನ್ನದಾನ ಸಂಸ್ಥೆಯ ನಿರ್ದೇಶಕಿ ಸಂಗೀತಾ ಶರ್ಮರವರು "ಸಾವಯವ ಆಹಾರ ಮಾತ್ರ ಮನುಷ್ಯನನ್ನು ನಿರೋಗಿಯಾಗಿ ಇರಿಸಬಲ್ಲದು. ನಮ್ಮ ನಡುವಿನ ಜೀವ ವೈವಿಧ್ಯವು ಕಾಣಿಕೆಯಾಗಿ ನೀಡಿರುವ ಅಮೂಲ್ಯ ಜೈವಿಕ ಸಂಪತ್ತನ್ನು ಉಳಿಸಿಕೊಳ್ಳಬೇಕಾಗಿದೆ. ನಾವು ಜೈವಿಕ ತಂತ್ರಜ್ಞಾನ ಆಹಾರವನ್ನು ತಿರಸ್ಕರಿಸಲೇಬೇಕು"ಎಂದು ಘೋಷಿಸಿರುತ್ತಾರೆ.

ಒಂದು ವಿನೂತನ ವಿವಾಹ

ಕಳೆದ ವರ್ಷಾಂತ್ಯದಲ್ಲಿ ಹೊಸದುರ್ಗದ ಹಿರಿಯ ರೈತ ಧುರೀಣ ಬಯಲಪ್ಪನವರ ಊರಾದ ತರೀಕೆರೆಯಲ್ಲಿ ಅವರ ಸುಪುತ್ರನ ವಿವಾಹ ಒಂದು ವಿನೂತನ ರೀತಿಯಲ್ಲಿ ಜರುಗಿರುತ್ತದೆ. ವಧು ವರರಿಗೆ ಶಾಸ್ತ್ರೋಕ್ತವಾಗಿ ಮದುವೆ ಒಂದೆಡೆ ಜರುಗುತ್ತಿದ್ದರೆ ಇನ್ನೊಂದೆಡೆ ನೂರಾರು ರೈತರು, ಮಹಿಳೆಯರು ಸೇರಿ ನಮ್ಮ ಕೃಷಿ ಬದುಕಿಗೆ ಬಂದೊದಗಿರುವ ವಿಪತ್ತುಗಳು ಮತ್ತು ಅವುಗಳ ನಿವಾರಣೆ ಬಗ್ಗೆ ತಜ್ಞರೊಡನೆ ಗಂಭೀರ ಚರ್ಚೆಯಲ್ಲಿ ತೊಡಗಿದ್ದರು. ಒಂದೆಡೆ ಪುರೋಹಿತರಿಂದ ಮಂತ್ರ ಮಾಂಗಲ್ಯಧಾರಣೆ ನೆರವೇರುತ್ತಿದ್ದರೆ ಮತ್ತೊಂದಡೆ ರಾಸಾಯನಿಕ ಕೃಷಿ, ವಿಶೇಷ ಆರ್ಥಿಕ ವಲಯಗಳ ದುಷ್ಪರಿಣಾಮದಿಂದ, ಜೀವವೈವಿದ್ಯ ರಕ್ಷಣೆ, ರೈತಾಪಿ ಬದುಕಿನ ಹೊಸ ಸಾಧ್ಯತೆಗಳ ಬಗ್ಗೆ ತಜ್ಞರಿಂದ ಪ್ರವಚನ ಪಡೆದು ಗಂಭೀರ ಚರ್ಚೆಗಳು ನಡೆಯುತ್ತಿದ್ದವು. ವಿವಾಹವೆಂಬುದು ಒಂದು ಸಾಮಾಜಿಕವಾಗಿ ಒಗ್ಗೂಡುವ ಪ್ರಮುಖ ಸಂದರ್ಭ. ಇದನ್ನು ಸಂಪ್ರದಾಯಕ ಆಚರಣೆ, ಆ ಮೂಲಕ ಉದರಕ್ಕೆ ಮೃಷ್ಟಾನ್ನ ಭೋಜನ ನೀಡುವುದಕ್ಕೆ ಮಾತ್ರ ಸೀಮಿತಗೊಳಿಸುವ ಬದಲು ಬುದ್ದಿ, ಮೆದುಳಿಗೂ ಒಂದಿಷ್ಟು ಆಹಾರ ಕೊಡಲು ಬಳಸಬೇಕೆನ್ನುವುದು ನಮ್ಮ ರೈತ ಸಂಘಟನೆಗಳ ಗುರಿಯಾಗಬೇಕೆಂದು, ಈ ವಿನೂತನ ವಿವಾಹದ ರುವಾರಿ ರೈತನಾಯಕ ಸಿದ್ದವೀರಪ್ಪನವರು ಅಭಿಪ್ರಾಯ ಪಡುತ್ತಾರೆ. ಈ ರೀತಿ ಮೆದುಳಿಗೆ ಊಟ ಬಡಿಸಲು ಪತ್ರಿಕೆ ಸಂಪಾದಕ ಪತ್ರಕರ್ತರಾದ ಉಜ್ಜಜ್ಜಿ ರಾಜಣ್ಣ, ಕೃಷ್ಣಮೂರ್ತಿ ಬಿಳಿಗೆರೆ, ರಾಮೇನಹಳ್ಳಿ ಚಂದ್ರಶೇಖರ್ ಕೃಷಿ ಅಧಿಕಾರಿಗಳಾದ ಶ್ರೀಮತಿ ಹಂಸವೇಣಿ ಮತ್ತು ಶ್ರೀ ಕುಮಾರ್ ಆಗಮಿಸಿದ್ದರು. ಹೊಸದುರ್ಗ ಹೇಳಿ ಕೇಳಿ ಬರಡು ಒಣ ಪ್ರದೇಶ. ಆದರೆ ಒಂದು ಕಾಲದಲ್ಲಿ ಹತ್ತಾರು ತೃಣಧಾನ್ಯಗಳ ಬೀಡು. ಸಭೆಯಲ್ಲಿದ್ದ ವೃದ್ಯಾಪ್ಯ ಮಹಿಳೆಯರು ಸಜ್ಜೆ ರೊಟ್ಟಿ, ನವಣೆ ಉಪ್ಪಿಟ್ಟು , ಆರ್ಕ ಚಿತ್ರಾನ್ನದ ರುಚಿ ಗಟ್ಟಿತನವನ್ನು ಜ್ಞಾಪಿಸುವುದರ ಮೂಲಕ ಮುಂದೆ ಪ್ರತೀ ಹೊಲದಲ್ಲೂ ಒಂದಿಷ್ಟು ಜಾಗದಲ್ಲಾದರೂ ಈ ಸತ್ವಯುತ ತೃಣ ಧಾನ್ಯಗಳನ್ನು ಬೆಳೆಸಬೇಕೆಂಬ ತೀರ್ಮಾನಕ್ಕೆ ಬಂದರು. ಹಾಗೇ, ಸಂಘದ ಸಧಸ್ಯರ ಮನೆಯಲ್ಲಿ ಜರುಗುವ ಮದುವೆಗಳಲ್ಲಿ ಈ ರೀತಿ ಮೆದುಳಿಗೆ ಒಳ್ಳೆ ಆಹಾರ ನೀಡುವುದರ ಜೊತೆಗೆ ಹೊಟ್ಟೆಗೂ ಸತ್ವಯುತ, ಸಂಪ್ರದಾಯಕ ಸಾವಯುವ ಆಹಾರ, ತಿಂಡಿ ತಿನಿಸುಗಳನ್ನು ನೀಡಬೇಕೆಂದು ಪ್ರಸ್ತಾಪಿಸಲಾಯಿತು. ಹೀಗೆ ಇದೊಂದು ವಿನೂತನ ವಿವಾಹ ಮಾತ್ರವಲ್ಲ ಈ ಮೂಲಕ ಗ್ರಾಮೀಣ ಪ್ರದೇಶದ ಸುಸ್ಥಿರ ಕೃಷಿ ಮತ್ತು ಬದುಕಿಗೆ ಪ್ರೇರಣೆ ನೀಡುವ ಹೊಸತೊಂದು ಸಾಧ್ಯತೆಯ ಬಗ್ಗೆ ಗಮನ ಹರಿಸಿದಂತೂ ಆಗಿರುತ್ತದೆ.



ಬೆಂಗಳೂರು ಜಿಕೆವಿಕೆಯಲ್ಲಿ ವಿಶಿಷ್ಟ ರೀತಿಯ ವಿಶ್ವ ಪರಿಸರ ದಿನಾಚರಣೆ

ಜೂನ್ 5 ರಂದು ಪ್ರತಿ ವರ್ಷ 'ವಿಶ್ವ ಪರಿಸರ ದಿನಾಚರಣೆ'ಯನ್ನು ವಿಶ್ವದಾದ್ಯಂತ ಆಚರಿಸಲಾಗುತ್ತಿದೆ. ಇದರ ಮುಖ್ಯ ಉದ್ದೇಶ ಪರಿಸರವನ್ನು ಕಾಪಾಡುವ ಬಗ್ಗೆ ಜನರಲ್ಲಿ ಅರಿವು ಮೂಡಿಸುವುದಾಗಿರುತ್ತದೆ. ಜನರ ಆರೋಗ್ಯಕ್ಕೆ, ಪ್ರಾಣಿ ಪಕ್ಷಿಗಳ ಉಳಿವಿಗೆ ಬೇಕಾದ ಪರಿಶುದ್ಧವಾದ ಗಾಳಿ, ನೀರು, ಆಹಾರವನ್ನು ಸೃಷ್ಟಿಸಿ ಮುಂದಿನ ಪೀಳಿಗೆಗೆ ಶುದ್ಧವಾದ ಪರಿಸರವನ್ನು ಬಿಟ್ಟು ಹೋಗುವ ಜವಾಬ್ದಾರಿ ನಮ್ಮ ನಿಮ್ಮೆಲ್ಲರದಾಗಿದೆ. ಈ ವರ್ಷದ ಘೋಷಣೆ ಏನೆಂದರೆ 'ಭೂಗ್ರಹಕ್ಕೆ ನಿಮ್ಮ ಅವಶ್ಯಕತೆ ಇದೆ. ಬನ್ನಿ ಒಂದಾಗಿ ಹವಾಮಾನ ಬದಲಾವಣೆಯ ವಿರುದ್ಧ ಹೋರಾಡೋಣ!' ಎಂಬುದು .

ಈ ವಿಶ್ವ ಪರಿಸರ ದಿನದಂದು ಡಾ.ವಿ.ಭಾಸ್ಕರ್ ನೇತೃತ್ವದ "ರಾಷ್ಟ್ರೀಯ ಅರಣ್ಯೀಕರಣ ಮತ್ತು ಪರಿಸರಾಭಿವೃದ್ಧಿ ಮಂಡಳಿ' ಜಿ.ಕೆ.ವಿ.ಕೆ. ಪ್ರಾದೇಶಿಕ ಕೇಂದ್ರ 'ಹುಣಸೆ ಬೆಳೆಗಾರರ ಮತ್ತು ಕೃಷಿ ತಜ್ಞರ ವಿಚಾರ ಗೋಷ್ಠಿ' ಒಂದನ್ನು ಏರ್ಪಡಿಸಿತ್ತು. ಈಗ ಮಳೆಗಾಲ ಪ್ರಾರಂಭವಾಗಿದೆ. ಇತ್ತೀಚೆಗೆ ಕೃಷಿ ಕೂಲಿಕಾರರ ಅಭಾವದಿಂದಾಗಿ, ಮಳೆಯಲ್ಲಿ ಏರುಪೇರಾಗಿ ಅದರಲ್ಲೂ ಶೇಕಡ 70 ರಷ್ಟು ಖುಷ್ಕಿ ಬೇಸಾಯ ಮಾಡುತ್ತಿದ್ದು ಸರಿಯಾಗಿ ಬೆಳೆ ತೆಗೆಯಲಾಗದೆ, ಬೇಸಾಯದ ಖರ್ಚು ಹೆಚ್ಚಾಗಿ, ನಷ್ಟವು ಆಗಿ ಅನೇಕ ರೈತರು ಕಷ್ಟ ಕಾರ್ಪಣ್ಯಗಳಿಗೆ ಈಡಾಗಿದ್ದಾರೆ. ಇಂತಹ ಬಹಳಷ್ಟು ರೈತರು ಖುಷ್ಕಿ ಭೂಮಿಯಲ್ಲಿ ಹುಣಸೆ ಬೆಳೆಯಲು ಮುಂದಾಗುತ್ತಿದ್ದಾರೆ. ಈಗಾಗಲೇ ನೂರಾರು ರೈತರು ಹುಣಸೆ ಬೆಳೆದು ಅದರ ಬಗ್ಗೆ ಮಾಹಿತಿ ಅಪೇಕ್ಷಿಸಿದ್ದಾರೆ. ಇಂತಹ ರೈತರಿಗೆ ಸೂಕ್ತ ಮಾಹಿತಿ ನೀಡಿದಲ್ಲಿ, ಇನ್ನೂ ಹಲವಾರು ರೈತರು ಹುಣಸೆ ಮರ ಬೆಳೆಸಲು ಮುಂದಾಗಿ ಅದರಿಂದ ಪ್ರಯೋಜನ ಪಡೆಯಬಹುದು ಮತ್ತು ಆ ರೀತಿಯಲ್ಲಾದರೂ ಒಣ ಭೂಮಿಯಲ್ಲಿ ವೃಕ್ಷಾಂಧೋಲನ ಆಗಿ ಪರಿಸರ ಮಾಲಿನ್ಯ ಮತ್ತು ಹವಾಮಾನ ಬದಲಾವಣೆಯನ್ನು ತಡೆಗಟ್ಟ ಬಹುದೆಂದು ಡಾ. ಭಾಸ್ಕರ್‌ರ ಮೊದಲ ಅಪೇಕ್ಷೆ. ಇನ್ನೊಂದು ಕುತೂಹಲವಾದ ಅಂಶವೆಂದರೆ, ಹುಣಸೆ ಮರದಲ್ಲಿ ಮಾರ್ಚನಿಂದಲೇ ಹೂ ಬಿಡಲು ಆರಂಭವಾದರೂ, ಜೂನ್ ಮೊದಲ ವಾರದಿಂದಲೇ ಸಾಮಾನ್ಯವಾಗಿ ಕಾಯಿ ಕಚ್ಚುವುದು ಆರಂಭವಾಗುವುದು. ಅಲ್ಲಿಯ ತನಕ ಬಿಟ್ಟ ಹೂವೆಲ್ಲ ಉದುರಿ ಹೋಗುತ್ತವೆ. ಜೂನ್‌ಗೆ ಮುಂಚೆ ಎಲ್ಲಿಯೂ ಒಂದು ಕಾಯಿ ಕಚ್ಚುವುದನ್ನು ನಾವು ನೋಡಲಾರೆವು. ಹುಣಸೆ ಮರ ಕಾಯಿ ಕಚ್ಚುವುದಕ್ಕೂ - **'ಹೆಚ್ಚುತ್ತಿರುವ ಭೂಮಿಯ ತಾಪಮಾನ'** ***(Global Warming)*** -ಆ ಮೂಲಕ ಹವಾಮಾನದಲ್ಲಿ ಬದಲಾವಣೆ - ಅದರಿಂದಾಗುತ್ತಿರುವ ಮಳೆಯಲ್ಲಿನ ಏರುಪೇರಿಗೆ ಬಹಳ ನಿಕಟ ಸಂಬಂಧ ವಿದೆ ಎನ್ನಲಾಗಿದೆ. ಹುಣಸೆ ಮರಗಳಲ್ಲಿ ಗೊಡ್ಡು ಮರಗಳಿವೆ ಏಕೆ, ಹುಣಸೆ ಫಸಲನ್ನು ಹೆಚ್ಚಿಸಲು ಏನೇನು ಮಾಡಬೇಕು, ಇತ್ಯಾದಿ ಪ್ರಶ್ನೆಗಳನ್ನು ರೈತರು ಕೇಳುತ್ತಿರುತ್ತಾರೆ. ಇವೆಲ್ಲ ವಿಚಾರಗಳ ಮಾಹಿತಿ ನೀಡಿ ಅವರ ಸಂದೇಹಗಳಿಗೆ ಸೂಕ್ತ ಪರಿಹಾರ ನೀಡಲಿಕ್ಕೋಸ್ಕರ ಹುಣಸೆ ಬೆಳೆಗಾರರನ್ನು ಮತ್ತು ಕೃಷಿ ವಿಶ್ವ ವಿದ್ಯಾನಿಲಯದ ತಜ್ಞರನ್ನು ಒಂದೇ ವೇದಿಕೆಗೆ ಕರೆತಂದು ಈ ವಿಚಾರ ಗೋಷ್ಠಿ ಯನ್ನು ಏರ್ಪಡಿಸಲಾಗಿತ್ತು. ಇದರಲ್ಲಿ ಈ ಹುಣಸೆ ಕೃಷಿಯನ್ನು ಅತ್ಯಂತ ವ್ಯವಸ್ಥಿತ ರೀತಿಯಲ್ಲಿ ಮಾಡುತ್ತಿರುವ ರಾಜ್ಯದ ಹಲವಾರು ರೈತರು ಭಾಗವಹಿಸಿ ದ್ದರು. ಅವರಲ್ಲಿ ಕಂಕನವಾಡ, ಶಿಗ್ಗಾಂವ್ ತಾಲ್ಲೂಕ್, ಹಾವೇರಿ ಜಿಲ್ಲೆಯ ಶ್ರೀ ಸಿ.ಡಿ. ಪಾಟೀಲ್ ಇವರು ತಮ್ಮ ಜಮೀನಿನಲ್ಲಿ ಬೀಜದಿಂದ ಬೆಳೆಸಿದ 14 ವರ್ಷದ ಒಂದು ಹುಣಸೆ ಮರವು ಎರಡು ಕ್ವಿಂಟಾಲ್ ನಷ್ಟು ಕಾಯಿ ಒಂದು ವರ್ಷಕ್ಕೆ ಬಿಡುತ್ತಿದೆ ಎಂದು ತಿಳಿಸಿದರು. ಇವರು ಮರಕ್ಕೆ ರೂ.1,500 ನಂತೆ ಕಾಯಿಗಳನ್ನು ಹರಾಜು ಹಾಕುತ್ತಿದ್ದಾರೆ ಮತ್ತು ಆ ರೀತಿ ಹರಾಜು ಹಾಕಿದ ರೈತರಿಗೆ 20 ಕೆ.ಜಿ. ಯಷ್ಟು ಹಣ್ಣನ್ನು ಕಂಟ್ರಾಕ್ಟ್‌ದಾರರು ನೀಡುತ್ತಿದ್ದಾರೆ ಇದರಿಂದಾಗಿ ಈ ರೈತರಿಗೆ ಒಂದೇ ಮರದಿಂದ ಒಟ್ಟು ರೂ.1,800

ನಿಂದ ರೂ.2,000 ಲಾಭವಾಗುತ್ತಿದೆ. ಇಂತಹ ತಳಿಗಳನ್ನು ಅಭಿವೃದ್ಧಿಪಡಿಸಿ ಈ ರೀತಿ 150 ಮರಗಳ ಕಸಿ ತೋಪಿನ ಒಂದು ಹೆಕ್ಟೇರ್ ಬೆಳೆಸಿದರೆ, ಅಂದಾಜು 30,000 ಕೆ.ಜಿ. ಹುಣಸೆ ಕಾಯಿ ಇಳುವರಿ ಬಂದು ಎರಡು ಲಕ್ಷಕ್ಕೂ ಅಧಿಕ ಲಾಭವಾಗುವ ಸಾಧ್ಯತೆಯಿದೆ ಎಂಬ ಅಚ್ಚರಿ ಅಂಶವೂ ಈ ಸಂದರ್ಭದಲ್ಲಿ ಬೆಳಕಿಗೆ ಬಂದಿತು. ಪ್ರಾರಂಭದಲ್ಲಿ ಕೃಷಿ ವಿ.ವಿ. ವಿಶ್ರಾಂತ ಉಪಕುಲಪತಿಗಳೂ ಈ ಕೇಂದ್ರದ ಪ್ರಥಮ ಮುಖ್ಯಸ್ಥರೂ ಆದ ಪ್ರೊ. ಎಸ್. ಬಿಸಲಯ್ಯ ಅತಿಥಿ ಭಾಷಣ ಮಾಡಿದರು. ನಂತರ ಡಾ. ಭಾಸ್ಕರ್‌ರವರು ಹುಣಸೆ ಕೃಷಿಯ ಬಗ್ಗೆ ಹಲವಾರು ಅಂಕಿಅಂಶಗಳು, ಇದರಲ್ಲಿ ಹೂಬಿಟ್ಟು ಕಾಯಿ ಆಗುವ ರೀತಿ, ಇದರಲ್ಲಾಗುವ ತೊಂದರೆಗಳ ಬಗ್ಗೆ ವಿವರವಾದ ಪ್ರಬಂಧ ಮಂಡನೆ ಮಾಡಿ ರೈತರ ಪ್ರಶ್ನೆಗಳಿಗೆ/ಸಂಶಯಗಳಿಗೆ ಉತ್ತರ ನೀಡಿದರು. ಜೊತೆಗೆ ನಾಟಿ ಹುಣಸೆ ತಳಿಗಳಾದ ಧರ್ಮಪುರಿಯ ಉರಿಗಾಂ, ಅಪರೂಪದ ರಕ್ತ ಹುಣಸೆ, ಕೋಲಾರದ ವಕ್ಕಲೇರಿ ತಳಿ ಇತ್ಯಾದಿಗಳ ಬಗ್ಗೆ ವಿವರ ನೀಡಿದರು. ಇವೆಲ್ಲಕ್ಕಿಂತ ಮುಖ್ಯವಾಗಿ ಸಕ್ಕರೆಯಷ್ಟು ಸಿಹಿಯಾಗಿರುವ ಅಪರೂಪದ ಸಿಹಿತಳಿಯ ಹುಣಸೆ ಒಂದನ್ನು ಪರಿಚಯಿಸಿದ್ದು ಮಾತ್ರವಲ್ಲ ಇಡೀ ಸಭೆಗೆ ಹಂಚಿ ರುಚಿನೋಡುವ ರೋಮಾಂಚನ ಅನುಭವವನ್ನೂ ಒದಗಿಸಿದರು.

ಬದನೆ ವೈವಿಧ್ಯ ಮೇಳ

ಬದನೆಕಾಯಿ ಜನ್ಮತಾಣ ಭಾರತ. ಕಾಡು ಬದನೆಯನ್ನು ಕೃಷಿಗೆ ಒಗ್ಗಿಸಿದ ಹೆಮ್ಮೆ ಈ ದೇಶದ ರೈತರದು. ನಾಲ್ಕು ಸಾವಿರ ವರ್ಷಗಳಿಂದ ಬದನೆಯ ಕೃಷಿ ನಮ್ಮಲ್ಲಿ ನಡೆಯುತ್ತಿದೆ. ರೈತರು ನೂರಾರು ತರಹದ ಬದನೆ ತಳಿಗಳನ್ನು ಅಭಿವೃದ್ಧಿಪಡಿಸಿ ಆಯಾ ಪ್ರದೇಶಕ್ಕೆ ಒಗ್ಗಿಸಿದ್ದಾರೆ. ಬದನೆಯ ವೈವಿಧ್ಯ ನೋಡಬೇಕೆಂದರೆ ಹಳ್ಳಿಗಾಡು ಸುತ್ತಿ ಬರಬೇಕು. ದೊಡ್ಡ ಬದನೆ, ಈರಂಗೆರೆ ಬದನೆ, ರಾಂಪುರ ಬದನೆ, ಗುಳ್ಳ ಬದನೆ, ಜೋಳ ಬದನೆ, ಬಾಲ ಬದನೆ, ಕೊತ್ತಿತಲೆ ಬದನೆ, ನೀಲಿ ಬದನೆ, ಗುಂಡು ಬದನೆ, ಬಿಳಿ ಬದನೆ, ಗೋಟಾಮಂಚೂರಿ, ಮುಳ್ಳು ಬದನೆ, ಬಾಸಲ ಬದನೆ...ಹೀಗೆ ನಮ್ಮ ರಾಜ್ಯದ ಬದನೆ ತಳಿಗಳ ಪಟ್ಟಿ ಬೆಳೆಯುತ್ತಾ ಹೋಗುತ್ತದೆ. ಟೊಮೆಟೋದ ನಂತರ ಹೆಚ್ಚು ಬೆಳೆಯುವ, ಬಳಸುವ ತರಕಾರಿಯಿದು. ವರ್ಷದ ಎಲ್ಲ ಋತುಮಾನಗಳಲ್ಲಿ ಬೆಳೆಯುವ, ಎಲ್ಲ ಮಣ್ಣಿಗೂ ಒಗ್ಗುವ ಅಪರೂಪದ ಬೆಳೆ. ಬಡವರ ತರಕಾರಿ ಎಂಬ ಹೆಗ್ಗಳಿಕೆ.


ಜನಪದರ ಹಾಡು, ಗಾದೆ ಮಾತು, ಕತೆ, ಕಾವ್ಯಗಳಲ್ಲಿ ಬದನೆ ಹಾಸು ಹೊಕ್ಕಾಗಿದೆ. ಸುರಪಾಲನ ವೃಕ್ಷಾಯುರ್ವೇದ ಗ್ರಂಥದಲ್ಲಿ ಬದನೆಕಾಯಿಯ ಗಾತ್ರ ದೊಡ್ಡದು ಮಾಡುವ, ಗಿಡ ಪೋಷಿಸುವ ತಂತ್ರಗಳ ವಿವರ ಸಿಗುತ್ತದೆ. ಆಯುರ್ವೇದದಲ್ಲಿ ಇದು ಔಷಧಿಯಾಗಿ ಬಳಕೆಯಾಗುತ್ತದೆ. ಒಂದರ್ಥದಲ್ಲಿ ಬದನೆ ಭಾರತೀಯರ ಬದುಕಿನ ಭಾಗವೇ ಹೌದು.

ತಂತ್ರಜ್ಞಾನದ ನೆರವಿನೊಂದಿಗೆ ಸೃಷ್ಟಿಯಾಗುವ ಕುಲಾಂತರಿ ಬದನೆ, ನಮ್ಮಲ್ಲಿನ ಸ್ಥಳೀಯ ತಳಿಗಳ ಮೇಲೆ ಮಾಡುವ ಪರಿಣಾಮಗಳನ್ನು ಜನರಿಗೆ ತಿಳಿಸಲು ಮತ್ತು ನಮ್ಮ ಹಾಗೂ ಇತರೆ ನೆರೆಹೊರೆಯ ರಾಜ್ಯದಲ್ಲಿ ಇರುವ ವಿವಿಧ ಸ್ಥಳೀಯ ಬದನೆ ತಳಿಗಳನ್ನು ಪರಿಚಯಿಸಲು 5ನೇ ಎಪ್ರಿಲ್ 2009ರ ಭಾನುವಾರದಂದು ಬೆಂಗಳೂರಿನ ಲಾಲ್‌ಭಾಗ್‌ನಲ್ಲಿ ಒಂದು ಬದನೆ ಮೇಳವನ್ನು ಹಮ್ಮಿಕೊಳ್ಳಲಾಗಿತ್ತು. ಈ ಬದನೆ ಮೇಳವನ್ನು ಏಡ್ ಇಂಡಿಯಾ, ಸಹಜ ಸಮೃದ್ಧ, ಜೈವಿಕ ಕೃಷಿಕ್ ಸೊಸೈಟಿ ಮತ್ತು ಸಂವಾದ ಸಂಸ್ಥೆಗಳು ಹಾಗೂ 93.5 *FM* ರೇಡಿಯೋ ಸೇರಿ ಏರ್ಪಡಿಸಿದ್ದವು. ಈ ಮೇಳದಲ್ಲಿ ಅಪರೂಪದ ಹಾಗೂ ವಿವಿಧ ಜಾತಿಯ ಬದನೆ ತಳಿಗಳ ಪ್ರದರ್ಶನ, ಬದನೆ ಖಾದ್ಯಗಳ ಸ್ಪರ್ಧೆ ಹಾಗೂ ಮಕ್ಕಳಿಗಾಗಿ ಚಿತ್ರಕಲಾ ಸ್ಪರ್ಧೆಯನ್ನೂ ಏರ್ಪಡಿಸಲಾಗಿತ್ತು. ಖ್ಯಾತ ಬಾಲಿವುಡ್ ನಿರ್ದೇಶಕ ಮಹೇಶ್ ಭಟ್ ನಿರ್ದೇಶನದ "ಪಾಯಿಸನ್ ಆನ್ ದಿ ಪ್ಲಾಟರ್" ಚಿತ್ರದ ಪ್ರದರ್ಶನವನ್ನೂ ಏರ್ಪಡಿಸಲಾಗಿತ್ತು. ಇದು ಗ್ರಾಹಕ ಮತ್ತು ರೈತರಲ್ಲಿ ಜಾಗೃತಿ ಮೂಡಿಸುವ ಅಪರೂಪದ ಪ್ರಯತ್ನವಾಗಿರುತ್ತದೆ.

ಲೇಖನ: ಜಿ.ಕೃಷ್ಣಪ್ರಸಾದ್, ಸಹಜ ಸಮೃದ್ಧ, ಬೆಂಗಳೂರು.

ಮರಳಿ ಹಳ್ಳಿಗೆ ಕೊಂಡೊಯ್ಯುವ "ನಾಗತಿಹಳ್ಳಿ ಸಂಸ್ಕೃತಿ ಹಬ್ಬ"

'ಭಾರತವೆಂಬ ಮಹಾವೃಕ್ಷಕ್ಕೆ ಹಳ್ಳಿಗಳೇ ತಾಯಿಬೇರು' ಎಂಬುದು ನಮ್ಮ ರಾಷ್ಟ್ರಪಿತ ಗಾಂಧೀಜಿಯ ಒಂದು ಮಾರ್ಮಿಕ ನುಡಿ. ಈ ತಾಯಿ ಬೇರನ್ನು ಗಟ್ಟಿಗೊಳಿಸಲು ನಮ್ಮ ಅತ್ಯಂತ ಕ್ರಿಯಾಶೀಲ ಸಾಹಿತಿ, ಚಲನಚಿತ್ರ ನಿರ್ದೇಶಕ ಮಿತ್ರ ನಾಗತಿಹಳ್ಳಿ ಚಂದ್ರಶೇಖರ್ ವಿನೂತನ ಕಾರ್ಯಕ್ರಮ ಒಂದನ್ನು ತಮ್ಮ ಹುಟ್ಟೂರಿನಲ್ಲಿ ಕಳೆದ ಐದು ವರ್ಷಗಳಿಂದ ಚೊಕ್ಕಟವಾಗಿ ನಿರ್ವಹಿಸಿಕೊಳ್ಳುತ್ತಾ ಬಂದಿರುವರು. ಬೆಂಗಳೂರು-ಮಂಗಳೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ಕುಣಿಗಲ್‌ನಿಂದಾಚೆಗಿರುವ ತಮ್ಮ ಹುಟ್ಟೂರಾದ ನಾಗತಿಹಳ್ಳಿಯಲ್ಲಿ ಪ್ರತಿವರ್ಷ ಯುಗಾದಿಯಂದು ಒಂದು ಹಬ್ಬದ ರೀತಿಯಲ್ಲಿ ಈ ಕಾರ್ಯವನ್ನು ಚಂದ್ರಶೇಖರ್ ನೆಡೆಸುತ್ತಾ ಬಂದಿರುವರು. **"ಮರಳಿ ಹಳ್ಳಿಗೆ ಹೋಗೋಣ"** ಎಂಬ ನಾಮಫಲಕದಡಿಯಲ್ಲಿ ಕಳೆದ ಬಾರಿಯ ಈ ಹಬ್ಬ ಮಾರ್ಚ 27ರಿಂದ 30ರ ತನಕ ಜರುಗಿರುತ್ತದೆ.




ನಾಗತಿಹಳ್ಳಿಯ ವಿವಿಧ ಜನಪರ ಸಂಘ ಸಂಸ್ಥೆಗಳು, ಶಾಲಾಶಿಕ್ಷಕರು ಮತ್ತು ಸುತ್ತಣ ಹತ್ತೂರ ಗ್ರಾಮಸ್ಥರು ಸೇರಿ ಈ ಬಾರಿ ಹಬ್ಬವನ್ನು ಆಚರಿಸಿರುತ್ತಾರೆ. ಬೇವು ಬೆಲ್ಲ ಸವಿಯುತ್ತಾ ಉಗಾದಿಯ ಶುಭಾರಂಭದೊಂದಿಗೆ ಪ್ರಾರಂಭವಾದ ಈ ಬಾರಿಯ ಹಬ್ಬ ಸುತ್ತಣ ಹತ್ತೂರ ಯುವಕರ ಆಟಗಳ ಸ್ಪರ್ಧೆ, ಮಹಾರಾಷ್ಟ್ರದ ಶಿವಾಜಿ ವಿಶ್ವವಿದ್ಯಾನಿಲಯದ ವಿದ್ಯಾರ್ಥಿನಿಯರ ಸಾಂಸ್ಕೃತಿಕ ವಿನಿಮಯ ಕಾರ್ಯಕ್ರಮ, ರಾಜ್ಯಮಟ್ಟದ ಚಲನ ಚಿತ್ರಕಥಾ ಶಿಬಿರ, ನಾಟಕ, ಗೊಂಬೆ ಪ್ರದರ್ಶನ, ಮಕ್ಕಳ ಕಲಾ ಮತ್ತು ಚಿತ್ರಕಲಾ ಶಿಬಿರಗಳು, ಯಕ್ಷಗಾನ, ಉಪನ್ಯಾಸ, ಕವಿಗೋಷ್ಠಿ ಎಲ್ಲವನ್ನೂ ಒಳಗೊಂಡಿತ್ತು. ಮೊದಲದಿನ ಉಗಾದಿಯ ಒಬ್ಬಟ್ಟಿನ ಊಟ ಬೇರೆ ಇತ್ತು. ಜೊತೆಗೆ ಮೂಳೆ ತಜ್ಞರಿಂದ ಉಚಿತ ವೈದ್ಯಕೀಯ ತಪಾಸಣೆ, ಮೀನು ಸಾಕಾಣಿಕೆ ಬಗ್ಗೆ ಪ್ರಾತ್ಯಕ್ಷಿಕೆ, ಹಾಗೇ, ಕಥೆಗಾರರು, ನಿರ್ಮಾಪಕರು ಮತ್ತು ನಿರ್ದೇಶಕರ ನಡುವಿನ ಸುವರ್ಣ ಮಾಧ್ಯಮವಾಗಿ *www.papillon.in* ಎಂಬ ವೆಬ್‌ಸೈಟ್ ಬಿಡುಗಡೆ ಕಾರ್ಯಕ್ರಮಗಳನ್ನೂ ಈ ಬಾರಿ ಹಮ್ಮಿಕೊಳ್ಳಲಾಗಿತ್ತು. ಕನ್ನಡ ಸಾಹಿತ್ಯ ಅಕಾಡೆಮಿ, ಪರಿಷತ್ ಮತ್ತು ನಾಟಕ ಅಕಾಡೆಮಿ ಅಧ್ಯಕ್ಷರುಗಳು, ಶ್ರೀ ದೊಡ್ಡಣ್ಣರಂತಹ ಕಲಾವಿದರು, ಪ್ರೊ.ಕಿ.ರಂ. ನಾಗರಾಜ್, ಜಯಂತ ಕಾಯ್ಕಿಣಿಯವರಂತಹ ಸಾಹಿತಿಗಳು, ಶ್ರೀ ಚಿರಂಜೀವಿ ಸಿಂಗ್ ಮತ್ತು ಟಿ.ತಿಮ್ಮೇಗೌಡರಂತಹ ನಿವೃತ್ತ ಸರ್ಕಾರಿ ಅಧಿಕಾರಿಗಳು, ಜೊತೆಗೆ ಇಂಗ್ಲೆಂಡಿನ ಪ್ರಸಿದ್ಧ ಅರ್ಥಶಾಸ್ತ್ರಜ್ಞೆ ಮತ್ತು ಸಮಾಜ ವಿಜ್ಞಾನಿ ವೃದ್ಧೆ ಶ್ರೀಮತಿ ಸ್ಕಾರ್ಲೆಟ್ ಎಫ್‌ಸ್ಟೀನ್ ಎಲ್ಲರನ್ನು ಇಲ್ಲಿಗೆ ಆಹ್ವಾನಿಸಲಾಗಿತ್ತು. ಇದೇ ಸಂದರ್ಭದಲ್ಲಿ ನಾಗತಿಹಳ್ಳಿ ಸಂಸ್ಕೃತಿಹಬ್ಬಗಳ ಪೂರ್ಣವಿವರಗಳನ್ನೊಳಗೊಂಡ ವೆಬ್‌ಸೈಟ್ *www.nagathihallihabba.com* ನ್ನೂ ಈ ಸಾಲಿನಲ್ಲಿ ಬಿಡುಗಡೆ ಮಾಡಲಾಯಿತು.

ಶ್ರದ್ಧಾಂಜಲಿ

ಹಿತ್ತಲಗಿಡದ ಪ್ರಕಾಶಕರಾಗಿದ್ದು ಪತ್ರಿಕೆಯ ಲೇಖನ ಪರಿಷ್ಕಾರ ಕಾರ್ಯವನ್ನು ಚಾಚೂ ತಪ್ಪದೆ ಅತ್ಯಂತ ಶ್ರದ್ಧೆಯಿಂದ ಮಾಡಿ ಇದರ ಬೆಳವಣಿಗೆಗೆ ಕಾರಣ ಕರ್ತೆಯಾಗಿದ್ದ ಶ್ರೀಮತಿ ಕೆ. ಮೀನಾಕ್ಷಿಯವರು ದಿನಾಂಕ 5, ಜನವರಿ 2009 ರಂದು ನಿಧನರಾಗಿರುತ್ತಾರೆ. ಇದಕ್ಕೆ ಹಿತ್ತಲಗಿಡ ಬಳಗ ತೀವ್ರ ಸಂತಾಪ ವ್ಯಕ್ತ ಪಡಿಸುತ್ತಿದೆ.

ಹೆಗಡೆಯವರ ಅಡಿಕೆ ಸುಲಿಯುವ ಯಂತ್ರ

ಮಲೆನಾಡಿನಲ್ಲಿ ಅಡಿಕೆ ಕೊಯಿಲು ಆರಂಭವಾದರೆ ಅಡಿಕೆ ಸುಲಿಯಲು ಕೂಲಿಯಾಳುಗಳು ದೊರಕುತ್ತಿಲ್ಲ ಎಂಬ ಆತಂಕದ ಮಾತುಗಳು ಬೆಳೆಗಾರರಿಂದ ಕೇಳಿ ಬರುತ್ತವೆ. ಇದಕ್ಕೆ ಪರಿಹಾರವಾಗಿ ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರ ತಾಲೂಕಿನ ಬಾಳೆಕುಳಿಯ ರೈತ ಶಿವಮೂರ್ತಿ ಹೆಗಡೆಯವರು ಚಾಲಿ ಅಡಿಕೆ (ಸಿಪ್ಪೆ ಸುಲಿಯದೇ ಒಣಗಿಸಿದ ಅಡಿಕೆ) ಸುಲಿಯುವ ಯಂತ್ರ ಒಂದನ್ನು ತಯಾರಿಸಿದ್ದಾರೆ. ವಿದ್ಯುತ್ ಮೋಟಾರ್, ರಬ್ಬರ್ ಪ್ಯಾಡ್, ಕಬ್ಬಿಣದ ಸ್ಟಾಂಡ್, ಬ್ಲೋವರ್ ಇತ್ಯಾದಿಗಳನ್ನು ಉಪಯೋಗಿಸಿ ಸರಳವಾಗಿ ತಯಾರಿಸಲಾದ ಈ ಯಂತ್ರದಲ್ಲಿ ಸುಲಿದ ಅಡಿಕೆ ಮತ್ತು ಸಿಪ್ಪೆ ಬೇರೆ ಬೇರೆಯಾಗಿ ಬೀಳುತ್ತದೆ. ಅಲ್ಲದೆ ಒಂದು ಅಡಿಕೆಯೂ ಒಡೆದು ಹಾಳಾಗುವುದಿಲ್ಲ ಎಂಬುದು ಈ ಯಂತ್ರದ ವೈಶಿಷ್ಟ್ಯ. ಒಂದು ಎಚ್.ಪಿ. ಮೋಟಾರ್‌ನಿಂದ ನಡೆಯುವ ಈ ಯಂತ್ರವು ವಿದ್ಯುತ್, ಪೆಟ್ರೋಲ್, ಸೀಮೆ ಎಣ್ಣೆ ಅಡುಗೆ ಅನಿಲ ಅಥವಾ ಸೋಲಾರ್ ಶಕ್ತಿಯ ಮೂಲಕವೂ ಚಾಲನೆ ಮಾಡಬಹುದು ಎನ್ನಲಾಗಿದೆ. ಒಂದು ಗಂಟೆ ಅವಧಿಯಲ್ಲಿ ಸುಮಾರು 50 ರಿಂದ 60 ಕೆ.ಜಿ.ಯಷ್ಟು ಅಡಿಕೆ ಸುಲಿಯಬಹುದು ಎಂದು ವಿಶ್ವಾಸದಿಂದ ಹೇಳುತ್ತಾರೆ ಹೆಗಡೆಯವರು. 90 ಕೆ.ಜಿ. ಭಾರವಿರುವ ಈ ಯಂತ್ರವನ್ನು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಸುಲಭವಾಗಿ ಸಾಗಿಸಬಹುದು. ಇದನ್ನು ತಯಾರಿಸಲು ಸುಮಾರು 60 ಸಾವಿರ ರೂಪಾಯಿ ಖರ್ಚಾಗಿದೆ. ಅಲ್ಲದೆ ಹಸಿ ಅಡಿಕೆ ಸುಲಿಯುವ ಯಂತ್ರವನ್ನೂ ತಯಾರಿಸುವ ಪ್ರಯತ್ನದಲ್ಲಿದ್ದೇನೆ ಎಂದು ಅವರು ತಿಳಿಸಿದ್ದಾರೆ.



ಕೆಲವು ದೊಡ್ಡ ಚಾಲಿ ಅಡಿಕೆ ಬೆಳೆಗಾರರು ಈ ಯಂತ್ರದ ಬಳಕೆ ಮಾಡುತ್ತಿದ್ದಾರೆ. ಜೊತೆಗೆ ಶಿರಸಿಯ ಟಿ.ಎಸ್.ಎಸ್., ಕೃಷಿ ವಿಜ್ಞಾನ ಕೇಂದ್ರ, ಭೈರುಂಬೆ ಸೊಸೈಟಿ, ಹೀಗೆ ಜಿಲ್ಲೆಯ ಹಲವಾರು ಸ್ಥಳಗಳಲ್ಲಿ ಈ ಯಂತ್ರದ ಪ್ರಾತ್ಯಕ್ಷಿಕೆ ನಡೆಸಿ, ರೈತರಿಗೆ ಮಾಹಿತಿ ನೀಡಲಾಗಿದೆ.

ಹೆಚ್ಚಿನ ಮಾಹಿತಿಗೆ ಶಿವಮೂರ್ತಿ ಹೆಗಡೆಯವರನ್ನು 9343336840 ಗೆ ಸಂಪರ್ಕಿಸಬಹುದು.

ಮೂಲ : ಸಿರಿ ಸಮೃದ್ಧಿ, ಮಾರ್ಚ 2009.

ಜಗದಾಳೆಯವರ ಹೂಳೆತ್ತುವ ಯಂತ್ರ

ಬೀದರ್ ಜಿಲ್ಲೆ ಔರಾದ ತಾಲೂಕಿನ ಮುಂಗನಾಳ ಗ್ರಾಮದ ಯುವ ರೈತ ನಾಗನಾಥ ಗಣಪತಿರಾವ್ ಜಗದಾಳೆ ಎಂಬುವರು ಕೇವಲ 2000ರೂ. ವೆಚ್ಚದಲ್ಲಿ ಹೂಳೆತ್ತುವ ಕೈ ಚಾಲಿತ ಯಂತ್ರ ಒಂದನ್ನು ತಯಾರಿಸಿದ್ದಾರೆ. ಇದರ ಸಹಾಯದಿಂದ ಈಗಾಗಲೇ ಅವರು ತಮ್ಮ ಹೊಲದಲ್ಲಿ 12 ಅಡಿಯಷ್ಟು ಬಾವಿ ಕೊರೆದಿದ್ದಾರೆ.

16 ಅಡಿ ಮತ್ತು 18 ಅಡಿ ಉದ್ದದ ಮೂರು ಮರದ ಕೊಂಬೆ, ಎತ್ತಿನ ಬಂಡಿಗೆ ಬಳಸುವ ವೈರ್ ಸಹಾಯದಿಂದ ಈ ಯಂತ್ರ ಸಿದ್ಧಪಡಿಸಲಾಗಿದೆ. ಮೂರು ಕ್ವಿಂಟಾಲ್‌ನಷ್ಟು ಭಾರ ಎತ್ತುವ ಸಾಮರ್ಥ್ಯ ಹೊಂದಿರುವ ಈ ಯಂತ್ರ ಹೊಸ ಬಾವಿ ಕೊರೆಯಲು, ಹೂಳೆತ್ತಲು ಅತ್ಯಂತ ಉಪಯುಕ್ತವಾಗಿದೆ.



ಸದ್ಯ ಈ ಯಂತ್ರಕ್ಕೆ 3 ಎಚ್.ಪಿ. ಹಳೆಯ ಮೋಟಾರ್ ಅಳವಡಿಸಿದ್ದಾರೆ. 3-4 ವ್ಯಕ್ತಿಗಳ ಸಹಾಯದಿಂದ 15 ರಿಂದ 20 ದಿನಗಳಲ್ಲಿ 30 ಅಡಿ ಆಳದ ಬಾವಿ ಕೊರೆಯಲಾಗುತ್ತದೆ ಎನ್ನುತ್ತಾರೆ ಜಗದಾಳೆಯವರು. ಕೂಲಿ ಹಿಡಿದು 15 ರಿಂದ 20 ಸಾವಿರ ರೂಪಾಯಿಗಳಲ್ಲಿ ಬಾವಿ ತಯಾರಾಗುತ್ತದೆ. ಆದರೆ ನಾವು ಇತ್ತೀಚಿನ ಯಾಂತ್ರೀಕೃತ ಕ್ರೇನ್ ಸಹಾಯದಿಂದ ಒಂದು ಬಾವಿ ಕೊರೆಯಲು ಇದರ ದುಪ್ಪಟ್ಟು ಖರ್ಚು ಬರುತ್ತದೆ. ವಿದ್ಯುತ್ ಮೋಟಾರು ಇಲ್ಲದೆಯೂ ಕೈ ಚಾಲಿತವಾಗಿ ಈ ಯಂತ್ರ ಬಳಸಬಹುದಾಗಿದೆ!

"ಮಹಾರಾಷ್ಟ್ರದ ನಮ್ಮ ಸಂಬಂಧಿಕರೊಬ್ಬರ ಪ್ರೇರಣೆಯಿಂದ ನಾನು ಈ ಯಂತ್ರ ತಯಾರಿಸಲು ಸಾಧ್ಯವಾಯಿತು. ನಮ್ಮ ರೈತ ಬಾಂಧವರಿಗೆ ಇದರ ಉಪಯೋಗ ಸಿಕ್ಕರೆ ಮಾತ್ರ ನಾನು ಮಾಡಿದ ಕೆಲಸಕ್ಕೆ ತೃಪ್ತಿ ಸಿಗುತ್ತದೆ" ಎಂದು ಹೇಳುತ್ತಾರೆ, ರೈತ ನಾಗನಾಥ ಜಗದಾಳೆ.

ಹೆಚ್ಚಿನ ಮಾಹಿತಿಗೆ ನಾಗನಾಥ ಅವರನ್ನು 9241679060 ಅಥವಾ 963279826 ಗೆ ಸಂಪರ್ಕಿಸಬಹುದು.

ಲೇಖಕ: ಆನಂದತೀರ್ಥ ಪ್ಯಾಟಿ

ಮಿನಿ ಶೋಧ ಯಾತ್ರೆ

ಅಹಮದಾಬಾದಿನ 'ಸೃಷ್ಟಿ' ಮತ್ತು ಗಂತರ್ ಸಂಸ್ಥೆಯ ಸಹಯೋಗದಿಂದ ಮಿನಿ ಶೋಧಯಾತ್ರೆಯನ್ನು ಗುಜರಾತಿನಲ್ಲಿ ಹಮ್ಮಿಕೊಳ್ಳಲಾಗಿತ್ತು. ನಾಲ್ಕು ದಿನಗಳ ಈ ಶೋಧಯಾತ್ರೆಯು ಇದೇ ಮೇ 11 ರಿಂದ ಗುಜರಾತಿನ ಸುರೇಂದ್ರನಗರ ಜಿಲ್ಲೆಯಲ್ಲಿ ವಚ್‌ರಾಜ್ ಬೇಟ್ ಜಿಂಜುವಾಡ ಮರುಭೂಮಿಯಿಂದ ಪ್ರಾರಂಭಗೊಂಡು ಮೇ 14ರಲ್ಲಿ ಖಾರಗೋಡದಲ್ಲಿ ಮುಕ್ತಾಯಗೊಂಡಿತು. ಪ್ರತಿದಿನ 15 ರಿಂದ 20ಕಿ.ಮಿ ಕಾಲು ನಡಿಗೆಯಲ್ಲೇ ಕ್ರಮಿಸಲಾಯಿತು. ಈ ಶೋಧಯಾತ್ರೆಯಲ್ಲಿ ಉಪ್ಪಿನ ತಯಾರಿಕೆ ಮಾಡುವವರ ಆರ್ಥಿಕ ಸ್ಥಿತಿಯನ್ನು, ಅವರ ಆರೋಗ್ಯದ ಬಗ್ಗೆ ಮತ್ತು ಜೀವನ ಸುಧಾರಣೆಯ ಸಾಧ್ಯತೆ, ಹಾಗೆ ಉಪ್ಪು ತಯಾರಿಕೆಯನ್ನು ಮತ್ತಷ್ಟು ವ್ಯವಸ್ಥಿತಗೊಳಿಸುವ ಬಗ್ಗೆ ಚರ್ಚಿಸಿ ತಿಳಿದುಕೊಳ್ಳಲಾಯಿತು. ಸ್ಥಳೀಯ ಪರಿಣಿತರು ಮತ್ತು ತಳಮಟ್ಟದ ಅನುಶೋಧಕರನ್ನು ಅವರ ಸ್ಥಳದಲ್ಲೇ ಗುರುತಿಸಿ ಸನ್ಮಾನಿಸಲಾಯಿತು. ಹೆಣ್ಣು ಮಕ್ಕಳಿಗೆ ಅವಸಾನದ ಅಂಚಿನಲ್ಲಿರುವ ತೃಣಧಾನ್ಯಗಳ ಉಪಯೋಗ ಮತ್ತು ಅವುಗಳಲ್ಲಿರುವ ಪೋಷ್ಟಿಕಾಂಶಗಳ ಮಹತ್ವವನ್ನು ಅರಿವು ಮಾಡಿಸುವ ಅಡುಗೆ ಸ್ಪರ್ಧೆಯನ್ನೂ ಏರ್ಪಡಿಸಲಾಯಿತು. ಹಾಗೆ ಶುಷ್ಕ ಪ್ರದೇಶದಲ್ಲಿ ಬರಗಾಲದಲ್ಲಿ ನೀರಿಲ್ಲದೆ ಹಳ್ಳಿ ಜನರು ಪಡುವ ತೊಂದರೆಗಳನ್ನೂ ಅಭ್ಯಸಿಸಲಾಯಿತು.

ಕೂಚುಭಟ್ಟ

ಲೀಸಾ ಇಂಡಿಯ :- ಇದುವರೆಗು ಇಂಗ್ಲೀಷಿನಲ್ಲಿ ಪ್ರಸಾರವಾಗುತ್ತಿದ್ದ ಪತ್ರಿಕೆಯಾದ ಲೀಸಾ ಇಂಡಿಯ ಈಗ ಕನ್ನಡದಲ್ಲಿ ಅನುವಾದಗೊಂಡು ಬಿಡುಗಡೆಯಾಗಿದೆ. ಇದರಲ್ಲಿ ಪ್ರಕಟವಾದ ಲೇಖನಗಳು ಕಳೆದ 10 ವರ್ಷಗಳಲ್ಲಿ ಸಂಯೋಜಿಸಿದ ಇಂಗ್ಲೀಷಿನ ಆವೃತ್ತಿಯಿಂದ ಆಯ್ಕೆ ಮಾಡಲಾಗಿದೆ. ಇದು ರೈತರು ಮತ್ತು ರೈತಮಹಿಳೆಯರನ್ನು ಸಬಲೀಕರಣಗೊಳಿಸುವುದು ಮತ್ತು ಸಮುದಾಯ ಗಳು ಅವರ ಸ್ವಂತ ಜ್ಞಾನ, ಕೌಶಲ್ಯ, ಮೌಲ್ಯ, ಸಂಸ್ಕೃತಿ ಮತ್ತು ಸಂಸ್ಥೆಗಳನ್ನು ಮೂಲವಾಗಿರಿಸಿಕೊಂಡು ಅವರ ಭವಿಷ್ಯದ ನಿರ್ಮಾಣ ಮಾಡುವ ಪ್ರಯತ್ನದ ಕುರಿತಾಗಿದೆ. ಜೊತೆಗೆ ರೈತರಿಗೆ ತಾಂತ್ರಿಕ ಮತ್ತು ಸಾಮಾಜಿಕ ಮಾರ್ಗದಲ್ಲಿ ಉತ್ಪಾದನೆ ಮತ್ತು ಆದಾಯ ಹೆಚ್ಚಿಸುವ ಕುರಿತು ಅನ್ವೇಷಿಸುವಂತೆ ಮಾಡುವ ಪ್ರಯತ್ನವೂ ಆಗಿದೆ. ಆಸಕ್ತರು ವಿಳಾಸ:ಎ.ಎಮ್.ಇ ಫೌಂಡೇಷನ್, ನಂ. 204, 100 ಫೀಟ್ ರಿಂಗ್ ರೋಡ್, ಮೂರನೇ ಫೇಸ್, ಬನಶಂಕರಿ ಎರಡನೇ ಬ್ಲಾಕ್, ಮೂರನೇ ಸ್ಟೇಜ್, ಬೆಂಗಳೂರು - 85. ಫೋನ್ : 91-080-26699512 ಸಂಪರ್ಕಿಸಬಹುದು.

ಕಲ್ಲು ಹಾಸಿನ ಮೇಲೆ ಹಸಿರು ಹೊದಿಕೆ:- ಲೇಖಕರು - ಆನಂದತೀರ್ಥ ಪ್ಯಾಟಿ, ಪ್ರಕಾಶನ - ಕೃಷಿ ಮಾಧ್ಯಮ ಕೇಂದ್ರ, ಬೆಲೆ - ರೂ.15

ಆನಂದತೀರ್ಥ ಪ್ಯಾಟಿಯವರು ಕಲ್ಲಿನಲ್ಲೂ ಹಸಿರು ಉಕ್ಕಿಸಿದ ಕೊಪ್ಪಳ ಜಿಲ್ಲೆ ಕಲ್ಲತಾವರಗೆರೆ ಗ್ರಾಮದ ಶೇಖಮ್ಮ ಮತ್ತು ಹುಚ್ಚಪ್ಪವಾಣಿ ದಂಪತಿಗಳ ಸಾಧನೆಯನ್ನು ಈ ಪುಸ್ತಕದಲ್ಲಿ ವಿವರಿಸಿದ್ದಾರೆ. ಈ ದಂಪತಿಗಳ ಪಾಲಿಗೆ ಬಂದ ನಾಲ್ಕು ಎಕರೆ ಜಮೀನು ಬರೀ ಕಲ್ಲು. ಇಂತಹ ಕಲ್ಲಿನ ಹೊಲದಲ್ಲಿ ಮಣ್ಣು ಹಾಕಿ ಬೆಳೆ ತೆಗೆಯುತ್ತಿರುವ ಇವರ ಸಾಹಸ, ಕಲ್ಲು ಸಂದಿಯಲ್ಲಿ ಎರೆಗೊಬ್ಬರದ ಉತ್ಪಾದನೆ, ಸಾವಯವ ಕೃಷಿ, ಇವರಿಗೆ ದೊರೆತಿರುವ ಪುರಸ್ಕಾರ, ಪ್ರೇರಣೆ ಹಾಗೂ ಇವರ ಸ್ವಾವಲಂಬನೆಯ ಬದುಕನ್ನು ಈ ಕೃತಿಯಲ್ಲಿ ವಿವರಿಸಲಾಗಿದೆ.

ಹನಿಗೂಡಿ ಹಳ್ಳ:- ಪ್ರಕಾಶನ - ಕೃಷಿ ಮಾಧ್ಯಮ ಕೇಂದ್ರ, ಧಾರವಾಡ. ಬೆಲೆ - ರೂ. 30. ಕೃಷಿ- ಗ್ರಾಮೀಣ ಬದುಕಿನಲ್ಲಿ ಅವೆಷ್ಟೋ ಅಗತ್ಯದ ಮಾಹಿತಿಗಳಿರುತ್ತವೆ. ಎಷ್ಟೇ ಉಪಯೋಗಿ ಮಾಹಿತಿಯಿದ್ದರೂ ಎಲ್ಲಾ ಸಂಚಿಕೆಗಳನ್ನು ಬಿಡಿಸಿ ಅದಕ್ಕಾಗಿ ಜಾಲಾಡುವುದು ಕಷ್ಟಸಾಧ್ಯ. ಈಗ ಇಂಥ ತುಣುಕು ಮಾಹಿತಿಗಳನ್ನೆಲ್ಲಾ ಅಡಿಕೆ ಪತ್ರಿಕೆಯ 'ಹನಿಗೂಡಿ ಹಳ್ಳ' ಅಂಕಣದಿಂದ ಆಯ್ದು ಒಂದೇ ಕಡೆ ಸಿಗುವಂತೆ ಧಾರವಾಡದ 'ಕೃಷಿ ಮಾಧ್ಯಮ ಕೇಂದ್ರ'ಮಾಡುತ್ತಿದೆ. ಇವುಗಳಲ್ಲಿ ಹೆಚ್ಚಿನವು ರೈತ ಅನುಶೋಧನೆಗಳು. ಈ ಮಾಹಿತಿಗಳು ರೈತರಿಗೆ ನಿತ್ಯದ ಕೃಷಿ ಕಾಯಕದಲ್ಲಿ ನೇರ ಉಪಯೋಗಕ್ಕೆ ಬರುವಂಥಹವು.

ಜಲನೆಮ್ಮದಿಯತ್ತ ಕಾಕೋಳ:- ಲೇಖಕರು - ಪೂರ್ಣಪ್ರಜ್ಞ ಬೇಳೂರು, ಪ್ರಕಾಶನ - ಕೃಷಿ ಮಾಧ್ಯಮ ಕೇಂದ್ರ, ಧಾರವಾಡ. ಬೆಲೆ - ರೂ.40

ಲೇಖಕರು ಹಾವೇರಿ ಜಿಲ್ಲೆ ಕಾಕೋಳದಲ್ಲಿ ತೆರೆದ ಬಾವಿಗಳಿಗೆ ಜಲಮರುಪೂರಣ ಮಾಡುತ್ತಿರುವ ರೂವಾರಿ ಚನಬಸಪ್ಪ ಶಿವಪ್ಪ ಕೊಂಬಳಿಯವರ ಜಲಸಾಧನೆ, ವರ್ಷದಿಂದ ವರ್ಷಕ್ಕೆ ಆದ ಬದಲಾವಣೆ ಮತ್ತು ಅವರ ಸಾವಯವ ಕೃಷಿಯ ಬಗ್ಗೆ ಈ ಪುಸ್ತಕಯಲ್ಲಿ ದಾಖಲಿಸಿದ್ದಾರೆ.

ಪ್ರತಿಕ್ರಿಯೆ

ಮಾನ್ಯರೇ,

ಕಳೆದ ಕೆಲವು ವರ್ಷಗಳಿಂದ ತಮ್ಮ ಪತ್ರಿಕೆಯನ್ನು ನಾನು ತರಿಸಿ ಓದುತ್ತಿದ್ದೇನೆ. ತಮ್ಮ ಪತ್ರಿಕೆಯು ನನ್ನ ಎಂ.ಎಸ್ಸಿ (ಪ್ರಾಣಿಶಾಸ್ತ್ರ) ಅಧ್ಯಯನಕ್ಕೆ ತುಂಬಾ ಉಪಯುಕ್ತವಾಯ್ತು, ಈಗ ನಾನು ಎಂ.ಇಡಿ. ಮತ್ತು ಎಂ.ಫಿಲ್. ಮುಗಿಸಿ ಉದ್ಯೋಗಾಕಾಂಕ್ಷಿಯಾಗಿದ್ದೇನೆ. ಹಾಗೂ ನನಗೆ ಜೀವನೋಪಾಯಕ್ಕಾಗೆ ಇರುವ ಚಿಕ್ಕ ಜಮೀನಿನಲ್ಲಿ ವ್ಯವಸಾಯ ಕಾರ್ಯ ನಡೆಸಲು, ಜೈವಿಕ ವಿಧಾನ ಅನುಸರಿಸಿ, ಉತ್ತಮ ರೀತಿಯ ಸಾವಯವ ಕೃಷಿ ವಿಧಾನಕ್ಕಾಗಿ ಕೂಡ ತಮ್ಮ ಪತ್ರಿಕೆ ಉತ್ತಮವಾಗಿ ಪ್ರಯೋಜನಕ್ಕೆ ಬರುತ್ತಿದೆ. ನನ್ನ ಸ್ನೇಹಿತರು ಹಾಗೂ ನಮ್ಮ ಸುತ್ತಮುತ್ತಲಿನ ರೈತರಿಗೆ ತಮ್ಮ ಪತ್ರಿಕೆಯು ಉತ್ತಮ ಪ್ರೇರಣೆ ನೀಡುತ್ತಿದೆ.

ಶ್ರೀ.ಜಿ.ಕೆ.ಕಾಂತರಾಜು ಎಂ.ಎಸ್ಸಿ. (ಪ್ರಾಣಿಶಾಸ್ತ್ರ) ಎಂ.ಇಡಿ.ಎಂ.ಫಿಲ್, ಪಾಂಚಜನ್ಯ, 8-180, ದೇವಾಂಗ ಪೇಟೆ, ಕೊಳ್ಳೆಗಾಲ - 571440, ಚಾಮರಾಜನಗರ ಜಿಲ್ಲೆ.

(ತುಂಬಾ ಸಂತಸವಾಯ್ತು, ಕಾಂತರಾಜುರವರೆ. ತಮ್ಮ ಅಧ್ಯಯನದ ಸಾರಾಂಶ ವನ್ನು ಸಂಕ್ಷಿಪ್ತವಾಗಿ ಬರೆದೆ ಕಳುಹಿಸಿ. ಪ್ರಕಟಿಸುವೆವು - ಸಂ)

ಮಾನ್ಯರೇ,

ಅಗ್ನಿಮುಖಿ-ಔಷಧಿ ಸಸ್ಯ (ವೈರು 14, ಕೊಯಿಲು 2-3, ಮೇ - ಡಿಸೆಂಬರ್, 2008) ವಿವರವಾಗಿ ಓದುತ್ತಿದ್ದಾಗ ನಮ್ಮೂರಿನ ಪದ್ಮಾವಕ್ಕನ ನೆನಪಾಯಿತು. ಅವರು ಅರೆ ತಲೆನೋವು, ತಲೆನೋವಿದ್ದವರಿಗೆ ಕಿವಿಗೆ ಬೇರು ಕಟ್ಟುತ್ತಾರೆ. ಅಂತಹವರ ಬೆಳಗ್ಗೆ ಮುಖತೊಳೆಯದೆ ಅವರ ಹತ್ತಿರ ಹೋಗಬೇಕು. ರೋಗಿ ಬಂದ ಕೂಡಲೆ ಹಿತ್ತಲಿಗೆ ಹೋಗಿ ಬೇರು ತಂದು ಕಿವಿಗೆ ಕಟ್ಟುತ್ತಾರೆ. ಅವರು ಎಂದೂ ಗುಟ್ಟು ಬಿಟ್ಟು ಕೊಟ್ಟಿಲ್ಲ. ಒಂದು ವಾರಕ್ಕೆ ಬಂದವರ ತಲೆನೋವು ಮಾಯ. ನನಗೂ ಕುತೂಹಲ. ಸ್ವಲ್ಪ ಔಷಧಿ ಸಸ್ಯಗಳ ಮಾಹಿತಿ ನನಗಿದೆ. ಪಾಣಾಜೆ ವೆಂಕಟರಾಂ ದೈತೋಟರಿಂದ ಈ ಗುಟ್ಟನ್ನು ಭೇದಿಸಿಕೊಂಡು ಗಿಡ ಪರಿಚಯ ಗುಣಗಳ ಪ್ರಚಾರ ಮಾಡಿದ್ದೇನೆ. ಈ ಸಸ್ಯದ ಉಳುವಿಕೆಗಾಗಿ ಪ್ರಯತ್ನಿಸಿದ್ದೇನೆ. ಇಂಥ ಪುಟ್ಟ ಬಳ್ಳಿಯಲ್ಲಿ ಎಂಥ ಅಘಾದ ಶಕ್ತಿಯಿದೆ. ಹಿತ್ತಲಗಿಡ ಇಂಥ ಸಸ್ಯಗಳ ಪರಿಚಯ ಮಾಡಿ ಕೊಡುತ್ತಿರುವುದು ಶ್ಲಾಘನೀಯ.

ಎಸ್.ರೋಹಿಣಿ ಶರ್ಮಾ, ಜರ್ನಲಿಸ್ಟ್, ಸಾಗರ, ಶಿವಮೊಗ್ಗ

(ಪ್ರತಿಕ್ರಿಯೆಗೆ ಧನ್ಯವಾದಗಳು. ದಯಮಾಡಿ ಈ ರೀತಿಯ ತಮ್ಮ ಅನುಭವವನ್ನು ಬರೆದು ಕಳುಹಿಸಿರಿ - ಸಂ)

ಬೆಂಗಳೂರು ಕೃಷಿ ವಿ.ವಿಯ ಹೆಮ್ಮೆಯ ಜೈವಿಕ ಸಂಪನ್ಮೂಲ ಸಂಕೀರ್ಣ

ಬೆಂಗಳೂರು ಗ್ರಾಮಾಂತರ ಜಿಲ್ಲೆಯ, ದೊಡ್ಡಬಳ್ಳಾಪುರ ತಾಲ್ಲೂಕಿನ ತೂಬುಗೆರೆ ಹೋಬಳಿಯಲ್ಲಿ ಬೆಂಗಳೂರು ಕೃ.ವಿ.ವಿಯ ಈ ಕೇಂದ್ರ ಸದ್ದಿಲ್ಲದೆ ರೈತರ ಪರವಾಗಿ ಒಳ್ಳೆಯ ಕೆಲಸ ಮಾಡುತ್ತಿದೆ. ಡಾ.ಕೆ.ನಾರಾಯಣಗೌಡರ ನೇತೃತ್ವದ ಈ ಯೋಜನೆಗೆ ಕೇಂದ್ರದ ವಿಜ್ಞಾನ ಮತ್ತು ತಂತ್ರಜ್ಞಾನ ಮಂತ್ರಾಲಯದ ನೆರವು ದೊರೆಯುತ್ತಿದೆ. ತೂಬುಗೆರೆ ಹೋಬಳಿಯ ವ್ಯಾಪ್ತಿಗೆ ಬರುವ 25 ಗ್ರಾಮಗಳ ಸುಮಾರು 8340 ರೈತ ಕುಟುಂಬಗಳ ಆದಾಯ ಮತ್ತು ಜೀವನ ಮಟ್ಟ ಮೇಲೆತ್ತುವ ಜವಾಬ್ದಾರಿ ಹೊತ್ತಿರುವ ಈ ಯೋಜನೆ 2005ರಲ್ಲಿ ಪ್ರಾರಂಭಗೊಂಡಿರುತ್ತದೆ. ತಂತ್ರಜ್ಞಾನ ವರ್ಗಾವಣೆ, ವಿಸ್ತರಣೆ, ಮಾರುಕಟ್ಟೆ ಗಟ್ಟಿ ಮಾಡುವುದು ಆ ಮೂಲಕ ಉತ್ಪಾದಕರ ಆದಾಯ ಹೆಚ್ಚಿಸುವಂತಹ ಹಲವು ಉದ್ದೇಶಗಳ ಜೊತೆಗೆ ರೈತ ಸಬಲೀಕರಣ ಮತ್ತು ಸಾಂಘಿಕ ಶಕ್ತಿ ಹೆಚ್ಚಿಸಲು ಜೈವಿಕ ಇಂಧನ, ಹೂವು, ಹಲಸು, ಜೋಳ, ಮೀನು, ರೇಷ್ಮೆ ಕೃಷಿಯಲ್ಲಿ ತೊಡಗಿರುವ ರೈತರ ಉತ್ಪಾದಕರ ಸಂಘಗಳನ್ನೂ ಈ ಮೂಲಕ ಸ್ಥಾಪಿಸಲಾಗಿದೆ. ಈ ಪ್ರತಿ ಸಂಘಗಳೂ ತಮ್ಮ ಉತ್ಪನ್ನಗಳ ಮೌಲ್ಯವರ್ಧನೆ ಮಾಡಿ, ಅಧಿಕ ಲಾಭಗಳಿಸುವಲ್ಲಿ ಯಶಸ್ವಿಯಾಗಿವೆ. ಉದಾಹರಣೆಗೆ ಹಲಸು ಉತ್ಪಾದಕರ ಸಂಘದ ಮೂಲಕ ಸುತ್ತಲಿನ ಗ್ರಾಮಗಳಲ್ಲಿ ಹೇರಳವಾಗಿ ದೊರಕುತ್ತಿದ್ದ ಹಣ್ಣನ್ನು ತಂದು ಬಿಡಿಸಿ ಗ್ರಾಹಕರಿಗೆ ತಲುಪಿಸುವುದು ಮಾತ್ರವಲ್ಲ ಇದರ ಮೌಲ್ಯ ವರ್ಧಿಸಿ ವಿದೇಶಕ್ಕೆ ರಫ್ತು ಮಾಡುವ ಒಪ್ಪಂದ ಒಂದಕ್ಕೂ ಇತ್ತೀಚೆಗೆ ಸಹಿಹಾಕಿರುತ್ತದೆ. ಈ ಹಲಸು ಉತ್ಪಾದಕರ ಸಂಘದ ಹಿರಿಯ ರೈತರಾದ ಕಾಚಹಳ್ಳಿ ಕೆ. ನರಸಿಂಹಯ್ಯನವರ ಹೊಲದಲ್ಲಿ ಅವರ ಕುಟುಂಬದ ಏಳು ತಲೆಮಾರಿನಿಂದ ಫಲಪಡೆಯುತ್ತಿರುವ ವಿಶಿಷ್ಟ ಹಲಸಿನ ಮರವಿರುವುದು ಅತ್ಯಂತ ಸ್ವಾರಸ್ಯಕರವಾಗಿರುತ್ತದೆ. ಈ ಮರದಲ್ಲಿ ಪ್ರತೀ ಸಾರಿ 30-40 ಕೆ.ಜಿ. ತೂಕದ 150-200 ಕ್ಕೂ ಮಿಕ್ಕಿದ ಹಲಸಿನ ಕಾಯಿ ಬಿಡುತ್ತಿರುತ್ತದೆ. ಅದರಲ್ಲಿ ದಪ್ಪನೆಯ 4 ಅಂಗುಲ ಉದ್ದದ ತೊಳೆಯ ರುಚಿ ಸ್ವಾದಿಷ್ಟವಾಗಿದ್ದು ಈ ಪ್ರತಿ ಹಲಸನ್ನು ರೂ.850ಕ್ಕೆ ಕೊಂಡು ಹೋಗಿದ್ದೂ ಉಂಟೆಂದು ಇದರ ಮಾಲೀಕ ನರಸಿಂಹಯ್ಯ ಹೆಮ್ಮೆಯಿಂದ ಹೇಳುತ್ತಾರೆ.

ಹಿತ್ತಲಗಿಡದ ಚಂದಾ ವಿವರ

ವಿಂಗಡಣೆ	ವಾರ್ಷಿಕ	ಆಜೀವ (ಹತ್ತು ವರ್ಷಗಳ ಕಾಲ)
ವಿದ್ಯಾರ್ಥಿಗಳು / ನಿರುದ್ಯೋಗಿಗಳು	ರೂ.50/–	ರೂ.400/–
ರೈತರು	ರೂ.60/–	ರೂ.500/–
ಇತರರು	ರೂ.75/–	ರೂ.600/–
ಸಂಸ್ಥೆಗಳು	ರೂ.350/–	ರೂ.2500/–
ಪೋಷಕರು	ರೂ.5000/– ಮತ್ತು ಅಧಿಕ	

(ವಿ.ಸೂ. ಹಿತ್ತಲಗಿಡದ ನೀತಿ ತತ್ವಗಳಿಗೆ ಹೊಂದಿಕೆಯಾಗುವ ಸಮಾನ ಮನಸ್ಕ ವ್ಯಕ್ತಿ ಮತ್ತು ಸಂಸ್ಥೆಗಳಿಂದ ಮಾತ್ರ ಪೋಷಕರ ವಂತಿಕೆ ಪಡೆಯಲಾಗುವುದು)

ಚಂದಾ ಹಣವನ್ನು ಅಂಚೆ (M.O.) ಅಥವಾ '*ಸಂಪಾದಕರು, ಹಿತ್ತಲಗಿಡ, ಬೆಂಗಳೂರು*' ಈ ಹೆಸರಿನ ಡ್ರಾಫ್ಟ್/ಚೆಕ್ ಮೂಲಕ ಕಳುಹಿಸಬೇಕು. ತಮ್ಮ ವಿಳಾಸ, ಪಿನ್‌ಕೋಡ್ ಮತ್ತು ವೃತ್ತಿಯನ್ನು ಸರಿಯಾಗಿ ಬರೆದು ಕಳುಹಿಸಬೇಕು. ಚಂದಾ ಹಣವನ್ನು ನವೀಕರಿಸುವಾಗ ಸ್ಪಷ್ಟವಾಗಿ ತಿಳಿಸತಕ್ಕದ್ದು.

ಹಿತ್ತಲಗಿಡದ ಇದುವರೆಗಿನ ಬಹುತೇಕ ಹಳೆ ಸಂಚಿಕೆಗಳು ಲಭ್ಯವಿರುತ್ತವೆ. ರೂ. 600/- ಪಾವತಿ ಮಾಡಿ ಪಡೆದು ಕೊಳ್ಳಬಹುದು. ಆಸಕ್ತರು ಮನಿ ಆರ್ಡರ್ ಅಥವಾ ಡಿ.ಡಿ. ಕಳಿಸಿ. ಅಂಚೆ ವೆಚ್ಚ ಉಚಿತ.

Subscription Rates for *Honey Bee*

Category	South Asia* (Indian Rs.)	International (US $ Dollar)
Annual		
Individual	150	30
Supporter	500	50
Institution / Library	2,500	200
Life (15 Years)		
Individual	2,500	500
Institution / Library	10,000	1,000
Other Publications		
Spirit of Sustaninability	50	10
Nature Heals	150	20
Profiles of Innovators	175	25
Back issues of *Honey Bee*	**(1990-2003)**	
Hard Copies (Postage Extra)	1, 500 Individual	50
	5,000 Institution	200
CD	250 Individual	20
	1,000 Institution	60

* *Includes : India, Nepal, Bhutan, Bangladesh, Pakistan, Sri Lanka and the Maldives.*

Please send your contributions through bank draft/cheque in favour of **A/c Sristi Innovations** at the editorial address; C/o Prof Anil K Gupta, Editor, *Honey Bee*, Indian Institute of Management, Vastrapur, Ahmedabad- 380 015 India. Phone : 91-79-26324927,
Email : honeybee@sristi.org;

Printed by M/s Replica Offset Printers, Industrial Town, Rajajinagar, Bangalore - 560 044
Published by Sri K. G. Priyadarshi (Owner) at No.399, 14-B Cross, New Town Yelahanka, Bangalore-560 106,
Edited by Dr. T.N. Prakash Kammaradi

ತಳ ಮಟ್ಟದ ಜನರ ಶೋಧನೆಗಳ ಹುಡುಕಾಟದ ಸ್ಪರ್ಧೆ

ರಾಷ್ಟ್ರೀಯ ಅನುಶೋಧನೆ ಪ್ರತಿಷ್ಠಾನ (National Innovation Foundation)

ರಾಷ್ಟ್ರೀಯ ಮಟ್ಟದ ಏಳನೆ ಸ್ಪರ್ಧೆ

ರಾಷ್ಟ್ರೀಯ ಅನುಶೋಧನೆ ಪ್ರತಿಷ್ಠಾನ

ಭಾರತ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ವಿಭಾಗ **(Department of Science and Technology)** ಈ ಪ್ರತಿಷ್ಠಾನವನ್ನು ಸ್ಥಾಪಿಸಿದ್ದು, ಇದರ ಮೂಲ ಉದ್ದೇಶ ತಳಮಟ್ಟದ ಸಂಶೋಧಕರನ್ನು ಗುರುತಿಸಿ, ಗೌರವಿಸಿ, ಪುರಸ್ಕರಿಸುವುದಾಗಿರುತ್ತದೆ. ಈ ಮೂಲಕ ಸುಸ್ಥಿರ ತಂತ್ರಜ್ಞಾನಕ್ಕೆ ಸಂಬಂಧಿಸಿದಂತೆ ಭಾರತವನ್ನು ಸ್ವಾವಲಂಬಿ ಹಾಗೂ ತೃತೀಯ ಜಗತ್ತಿಗೇ ನೇತೃತ್ವ ವಹಿಸಲು ಸಿದ್ಧವಾಗಿರುವಂತಹ ರಾಷ್ಟ್ರವನ್ನಾಗಿ ರೂಪಿಸುವುದಾಗಿದೆ. ಪ್ರತಿಷ್ಠಾನವು ತಳಮಟ್ಟದ ಸಂಶೋಧಕರಿಗೆ ಮೂರು ರೀತಿಯಲ್ಲಿ ನೆರವಾಗಲಿದೆ. ಅ) ಆಧುನಿಕ ವಿಜ್ಞಾನ ಹಾಗೂ ತಂತ್ರಜ್ಞಾನದ ಪ್ರವೀಣರೊಂದಿಗೆ ಸಂಪರ್ಕ ಕಲ್ಪಿಸುವುದು, ಆ) ಶೋಧನೆಗಳನ್ನು ಉದ್ದಿಮೆಯನ್ನಾಗಿ ಪರಿವರ್ತಿಸುವುದು, ಇ) ಬೌದ್ಧಿಕ ಸನದಿನ ಹಕ್ಕು **(Intellectual Property Rights)** ಶೋಧಕರಿಗಾಗಿ ದೊರೆಯುವಂತೆ ಮಾಡಿ, ಅವರಿಗೆ ಬೇಕಾದ ಮೂಲಧನ ಒದಗಿಸುವಲ್ಲಿ ನೆರವಾಗುವುದು. ಪ್ರತಿಷ್ಠಾನವು ರಾಷ್ಟ್ರಮಟ್ಟದಲ್ಲಿ, ತಳಮಟ್ಟದ ಸಂಶೋಧಕರು ಹಾಗೂ ಇತರರ ಸಂಶೋಧನೆಗಳ ದಾಖಲಾತಿ ಸಿದ್ಧಪಡಿಸುವ ಉದ್ದೇಶ ಹೊಂದಿದ್ದು; ನಮ್ಮ ಸಮಾಜದಲ್ಲಿನ ಮೂಲೆ ಮೂಲೆಯ ಶೋಧಕರಿಗೆ ನೆರವಾಗುವಂತಹ, ಕಾಯ್ದೆ ಕಾನೂನಿನ ರೂಪುರೇಷೆ ಸಿದ್ಧಪಡಿಸಲಿದೆ.

ಪ್ರಶಸ್ತಿ

ತಳಮಟ್ಟದ ಜನರ ಶೋಧನೆಗಳ ಹುಡುಕಾಟದ ರಾಷ್ಟ್ರೀಯ ಸ್ಪರ್ಧೆಯಲ್ಲಿ ಅತ್ಯುತ್ತಮ ಅನುಶೋಧನೆಗೆ ರೂಪಾಯಿ 1,00,000 ಮೊದಲ ಬಹುಮಾನ, ರೂಪಾಯಿ 50,000 ಹಾಗೂ ರೂಪಾಯಿ 25,000, 2ನೇ ಮತ್ತು 3ನೇ ಬಹುಮಾನ ಕೊಡಲಾಗುವುದು. ಜೊತೆಗೆ ರೂಪಾಯಿ 10,000 ಪ್ರೋತ್ಸಾಹಕ ಬಹುಮಾನಗಳನ್ನು ನೀಡಲಾಗುವುದು. ಶೋಧನೆಗಳ ಜೊತೆಯಲ್ಲಿ, ಇಂತಹ ತಳಮಟ್ಟದ ಶೋಧಕರನ್ನು ಪರಿಚಯಿಸಿದ ವ್ಯಕ್ತಿ ಹಾಗು ಸಂಸ್ಥೆಗಳಿಗೆ 50,000, 25,000 ಮತ್ತು 10,000ಗಳ ಮೂರು ವಿಶೇಷ ಬಹುಮಾನಗಳಿವೆ. ಹಾಗೇ, ರಾಜ್ಯ ಮಟ್ಟದಲ್ಲೂ ಬಹುಮಾನಗಳನ್ನು ನೀಡಲಾಗುವುದು. ಬಹುಮಾನ ವಿಜೇತ ಶೋಧನೆಗಳು **ರಾಷ್ಟ್ರೀಯ ದಾಖಲಾತಿ ಪುಸ್ತಕ (National Register)**ದಲ್ಲಿ ಸ್ಥಾನ ಪಡೆಯಲಿವೆ. ತಳಮಟ್ಟದ ಶೋಧನೆ ಹಾಗೂ ಶೋಧಕರಿಗೆ ಸಾಕಷ್ಟು ಪ್ರಚಾರ ಹಾಗೂ ಪ್ರಾಮುಖ್ಯತೆಯನ್ನು ಕೂಡಾ ನೀಡಲಾಗುವುದು.

ಸ್ಪರ್ಧೆ

ಯಾವುದೇ ರೀತಿಯ ಸಾಂಸ್ಥಿಕ ಮೂಲದ ನೆರವು, ವ್ಯವಸ್ಥಿತ ವಿಜ್ಞಾನ ಮತ್ತು ತಂತ್ರಜ್ಞಾನ ಸಂಸ್ಥೆಗಳ ಮಾರ್ಗದರ್ಶನ ಇಲ್ಲದೇ ರೈತರು, ಬುಡಕಟ್ಟು ಜನಾಂಗಗಳು, ಹೈನುಗಾರರು, ಕರಕುಶಲಕರ್ಮಿಗಳು, ಮಹಿಳೆಯರು, ಬೆಸ್ತರು ಇಂತಹವರೇ ಮೊದಲಾದ ಸ್ಥಳೀಯ ಮಟ್ಟದಲ್ಲಿ ವ್ಯಕ್ತಿ, ಗುಂಪು ಮತ್ತು ಸಮುದಾಯಗಳು ತಮ್ಮ ಕಸುಬು, ಕೃಷಿ, ಪರಿಸರ, ಜೀವ ವೈವಿಧ್ಯತೆಗಳನ್ನು ಕಾಪಾಡುವಲ್ಲಿ ಕಂಡು ಕೊಂಡಿರುವ ವಿಧಿ ವಿಧಾನಗಳು, ಶೋಧಿಸಿರುವ ಉಪಕರಣಗಳು, ಜಾನುವಾರು ಚಿಕಿತ್ಸೆ, ಬೆಳೆ ಸಂರಕ್ಷಣಾ ಪದ್ಧತಿಗಳು, ಕಡಿಮೆ ವೆಚ್ಚದ ಯಂತ್ರೋಪಕರಣಗಳು, ಇನ್ನಾವುದೇ ರೀತಿಯ ಸಾಮಾನ್ಯ ಜನರ ಅನುಕೂಲಕ್ಕಾಗಿ ಮೂಡಿ ಬಂದಿರುವ ಅನುಶೋಧನೆಗಳನ್ನು ಸ್ಪರ್ಧೆಗೆ ಕಳುಹಿಸ ಬಹುದು. ಆದರೆ ಸಾಮಾಜಿಕವಾಗಿ ಒಪ್ಪಿತವಲ್ಲದ ಹಾಗೇ ಪರಿಸರದ ಮೇಲೆ ಹಾನಿಮಾಡುವ ಅನುಶೋಧನೆಗಳನ್ನು ಈ ಸ್ಪರ್ಧೆಯಲ್ಲಿ ಸ್ವೀಕರಿಸಲಾಗುವುದಿಲ್ಲ. ಈ ಸ್ಪರ್ಧೆಗೆ ಸ್ವೀಕೃತವಾದ ಅನುಶೋಧನೆಗಳನ್ನು ಬೇರೆಯವರೊಡನೆ ಹಂಚಿಕೊಳ್ಳುವ ಮತ್ತು ವಾಣಿಜ್ಯೀಕರಣಗೊಳಿಸುವ ಬಗ್ಗೆ ಹಾಗೇ ಈ ಮೂಲಕ ಬರಬಹುದಾಗಿರುವ ಲಾಭಾಂಶದ ಹಂಚಿಕೆ, ಈ ಎಲ್ಲದರ ಬಗ್ಗೆ ಇಂತಹ ಅನುಶೋಧನೆಗಳ ನೈಜ ವಾರಸುದಾರರಿಂದ ಒಂದು **'ಪೂರ್ವ ಸೂಚಿತ ಸಮ್ಮತಿ'** (Prior Informed Consent) ಪಡೆದ ನಂತರವೇ ಮುಂದುವರೆಯಲಾಗುವುದು.

ಭಾಗವಹಿಸುವ ವಿಧಾನ

ಅನುಶೋಧನೆಗಳಿಗೆ ಸಂಬಂಧಿಸಿದಂತೆ ವ್ಯಕ್ತಿ ಮತ್ತು ಗುಂಪುಗಳು ಎಷ್ಟು ಬೇಕಾದರೂ ಮಾಹಿತಿಗಳನ್ನು ಕಳುಹಿಸಿಕೊಡಬಹುದು. ಪ್ರವೇಶ ಪತ್ರವು ಶೋಧನೆಯ ವಿವರ, ಕಾರ್ಯಭೂತ ವ್ಯಕ್ತಿ ಅಥವಾ ಸಮುದಾಯದ ಸಂಪೂರ್ಣ ಪರಿಚಯ, ಶೋಧನೆ ಮತ್ತು ಕಾರ್ಯಭೂತ ವ್ಯಕ್ತಿಯ ಹಿನ್ನೆಲೆ ಇವೆಲ್ಲವುಗಳ ಕುರಿತಂತೆ ಸಾಧ್ಯವಾದಷ್ಟು ಮಟ್ಟಿನ ವಿವರವನ್ನು ಹೊಂದಿರಬೇಕು. ಛಾಯಾ ಚಿತ್ರಗಳು ಮತ್ತು ಮಾದರಿಗಳನ್ನೂ ಸಹ ಕಳಿಸಬಹುದು. ಈ ಶೋಧನೆಯನ್ನು ಬಳಕೆ ಮಾಡುತ್ತಿದ್ದಲ್ಲಿ ಸುಮಾರು ಎಷ್ಟು ಮಂದಿ ಮತ್ತು ಎಷ್ಟು ಕಾಲದಿಂದ ಬಳಕೆ ಮಾಡುತ್ತಿದ್ದಾರೆ ಎಂಬ ವಿವರ ಕೂಡಾ ಅಗತ್ಯ. ಶೋಧಕ ಮತ್ತು ಶೋಧನೆಗಳ ಚಿತ್ರ, ಫೋಟೋಗಳನ್ನು, ಸಾಧ್ಯವಾದಲ್ಲಿ ವಿಡಿಯೋವನ್ನು ಪ್ರವೇಶ ಪತ್ರದೊಂದಿಗೆ ಕಳಿಸಿದರೆ ಉತ್ತಮ. ಏಳನೆ ಸ್ಪರ್ಧೆಗೆ ಡಿಸೆಂಬರ್ 2009ರವರೆಗೆ ಅವಕಾಶವಿದೆ. ಅನುಶೋಧನೆಗಳನ್ನು 'ಹಿತ್ತಲಗಿಡ' ಅಥವಾ National Coordinator, National Innovation Foundation, Bungalow No.1 Satellite Complex, Permchand Nagar Road, Ahmedabad - 380015 Gujarat. e-mail : campaign@nifindia.org ಇಲ್ಲಿಗೆ ಕಳುಹಿಸಬಹುದು.

ಪತ್ರಿಕೆ ನೋಂದಣಿ ಸಂಖ್ಯೆ 66842/96

ಅಂಚೆ ಚೀಟಿ

ಗೆ,

....

....

....

....

ವಿಳಾಸ

ಡಾ. ಟಿ. ಎಸ್. ಪ್ರಕಾಶ್ ಕುಮಾರ

ಪ್ರಾಧ್ಯಾಪಕ ಮತ್ತು

ಗೌರವ ಸಂಪಾದಕ 'ಹಿತ್ತಲಗಿಡ'

ಕೃಷಿ ಅರ್ಥಶಾಸ್ತ್ರ ವಿಭಾಗ

ಕೃಷಿ ವಿಶ್ವವಿದ್ಯಾನಿಲಯ, ಜಿ.ಕೆ.ವಿ.ಕೆ.

ಬೆಂಗಳೂರು - 560 065

Ph: 080-23620025

email: prakashtnk@yahoo.com